
# ನಾದನೂಪುರ ವಂಡಾರು
# Nadanoopura Vandaru



ಮುಖ್ಯಸ್ಥರು – ವಂಡಾರು ಗೋವಿಂದ
97418 47278

ಪ್ರಧಾನ ಸಂಪಾದಕರು – ಶುಭಾಶಯ
9482847978

Nadanoopura Yakshothana Trust (NYT) (R.)
Vandaru, Marvi, Vandaru village and Post,
Brahmavara Taluk, Udupi District – 576223
Email : nadanoopuravandaru@gmail.com
Website – https://nyt.1ngo.in/

ಯಕ್ಷಗಾನ ಸಮ್ಮೇಳನದ ಅಧ್ಯಕ್ಷರಿಗೆ ಪ್ರಥಮ ಅಹ್ವಾನ ಪತ್ರಿಕೆ

ಪರಿವಿಡಿ

ಬೋರ್ಡ್ ರೂಮ್
ಸಂಪಾದಕೀಯ
ಯಕ್ಷಗಾನ ಸಮ್ಮೇಳನ– ಅಧ್ಯಕ್ಷರ ಮನದಾಳ
ಯಕ್ಷಗಾನ ಕಾರ್ಯಕ್ರಮಗಳಿಗೆ ಪ್ರಾಯೋಜಕತ್ವ
ನಡುತಿಟ್ಟಿನ ಆಶಾಕಿರಣ – ಕೋಟ ಸುರೇಶ ಬಂಗೇರ
ಧೀರ ಕಲೆಯೊಳಗೆ ಕೀರವಾಣಿಯರು– ಸುಮಂಗಲಾ ರತ್ನಾಕರರಾವ್
ಮಾಂಬಾಡಿ ನಾರಾಯಣ ಭಾಗವತ – ಬದುಕಿನ ನೋಟ – ಸರಣಿ ಲೇಖನ – ಎಸಳು – 1
ಕಾಡುವ ಪಾತ್ರ– 1 ಬೆಲ್ಲೂರು ರಮೇಶ್
2 ಬೆಳ್ಳಾರೆ ಮಂಜುನಾಥ್ ಭಟ್
ನಮ್ಮ ಲೈಬ್ರರಿ – ದೇವಿದಾಸ ಕವಿಯ ಯಕ್ಷಗಾನ ಪ್ರಸಂಗಗಳು

## ಬೋರ್ಡ್ ರೂಂ



ಗೋವಿಂದ ವಂಡಾರು

***ನಮಸ್ಕಾರ ಓದುಗರೇ,***

ಚೌಕಿಯೊಳಗಿನ ಒಂದು ನೋಟವನ್ನು ಕೊಡುವ ಪ್ರಯತ್ನ ಈ ಲೇಖನದಲ್ಲಿ. ಒಬ್ಬ ಕಲಾವಿದನಾದವನು ಕೇವಲ ಕಲಾವಿದನಾಗಿಯಷ್ಟೇ ಮೊದಲು ಒಂದು ಮೇಳಕ್ಕೆ ಸೇರಿಕೊಳ್ಳುತ್ತಾನೆ. ಯಾವುದೇ ಕಲಾವಿದ ಮೊದಲು ಬಯಲಾಟ ಮೇಳಗಳಲ್ಲಿ ಕೋಡಂಗಿ ವೇಷ, ಬಾಲಗೋಪಾಲ ವೇಷಗಳಲ್ಲಿ ಪಳಗಿಯೇ ಸಾಧಾರಣ ಮಟ್ಟಿನ ವೇಷ ಮಾಡುವ ಹಂತಕ್ಕೆ ಏರಬೇಕಾಗುತ್ತದೆ. ಪ್ರತೀ ಕಲಾವಿದನಿಗೂ ಮೊದಲು ಗೆಜ್ಜೆ ಕಟ್ಟಿದ ಮೇಳ ಮಹತ್ವದ್ದಾಗಿರುತ್ತದೆ. ಯಾಕೆಂದರೆ ಹೆಚ್ಚಿನ ಕಲಿಕೆಗಳೂ ಅಲ್ಲೇ ನಡೆದಿರುತ್ತವೆ. ಪ್ರಥಮ ಬಾರಿಗೆ ನೂಪುರ ವಂದನೆ, ಗಣಪತಿ ವಂದನೆ, ಗುರುವಂದನೆಯ ನಂತರ ರಂಗಪ್ರವೇಶ, ಇದು ಯಕ್ಷಗಾನದ ಕಟ್ಟುಪಾಡು. (ನಾನು ಮೊದಲಿಗೆ ಗೆಜ್ಜೆ ಕಟ್ಟಿದ ಮೇಳ ಯಕ್ಷಗಾನದ ಭೀಷ್ಮ ಎಂದೆನಿಸಿಕೊಂಡ ಮೂಡಲಕಟ್ಟೆ ಮುತ್ತಯ್ಯ ಹೆಗಡೆಯವರ ಯಜಮಾನಿಕತ್ವದ ಶ್ರೀ ದುರ್ಗಾಪರಮೇಶ್ವರಿ ಯಕ್ಷಗಾನ ಮಂಡಳಿ, ಶ್ರೀ ಕ್ಷೇತ್ರ ಹಾಲಾಡಿ). ಮೇಳದ ತಿರುಗಾಟದ ಅವಧಿಯಲ್ಲಿ ವಿವಿಧ ಪಾತ್ರಗಳಲ್ಲಿ ಹೆಜ್ಜೆಗಾರಿಕೆ ಮಾತುಗಾರಿಕೆಯಲ್ಲಿ ಪಳಗಿ ನಂತರ ಪ್ರಮುಖ ಪಾತ್ರಗಳನ್ನು ನಿರ್ವಹಿಸುವ ಅವಕಾಶ ನೀಡುತ್ತಾರೆ, ಅದೂ ಪ್ರತಿಭೆಯನ್ನು ಗುರುತಿಸಿ. ಸ್ಥಾನದ ಮಾತು ನಂತರ. ಚೌಕಿಯೊಳಗಿನ ಸ್ಥಾನದ ವ್ಯವಸ್ಥೆ ಹೇಗೆಂದರೆ, ಪ್ರಧಾನ ಸ್ಥಾನ ಮೇಳದ ಭಾಗವತನಿಗೆ, ಎರಡನೆಯ ವೇಷಧಾರಿ ಎಂದರೆ ಕಥೆಯ ಮುಖ್ಯ ಪಾತ್ರವನ್ನು ನಿಭಾಯಿಸುವ ಅಷ್ಟೇ ಅಲ್ಲ, ದೀರ್ಘ ಅನುಭವ ಹೊಂದಿರುವ, ಎಲ್ಲಾ ಪ್ರಸಂಗಗಳ ಪಾತ್ರಗಳ ನಡೆಯನ್ನು ಬಲ್ಲ, ಸಹಕಲಾವಿದರ ಪ್ರತಿಭಾ ಸಾಮರ್ಥ್ಯಗಳನ್ನರಿತು ಪಾತ್ರ ಹಂಚುವ ಸಾಮರ್ಥ್ಯವುಳ್ಳ ಕಲಾವಿದ. ನಂತರ ಮೂರನೇ ವೇಷ ಪ್ರಮುಖ ಪಾತ್ರಗಳನ್ನು ಮಾಡಬಲ್ಲ ಪುಂಡು ವೇಷಧಾರಿ. ಉಳಿದ ಸ್ಥಾನಗಳು ಬೆಳೆಯುತ್ತಿರುವ ಕಲಾವಿದರಿಗೆ. ಇನ್ನು ಸ್ತ್ರೀ ವೇಷದಲ್ಲೂ ಪ್ರಧಾನ ವೇಷ, ಎರಡನೇ ಸ್ತ್ರೀ ವೇಷ ಹಾಗೂ ಪೀಠಿಕೆ ಸ್ತ್ರೀ ವೇಷ ಎಂಬ ಸ್ಥಾನಗಳುಂಟು. ಸ್ಥಾನ ಮೇಲಕ್ಕೇರುವುದು ಕಲಾವಿದನಿಗೆ ಸಿಗುವ ಗೌರವವೂ ಹೌದು, ಅದರೊಂದಿಗೆ ಸಂಭಾವನೆಯೂ ಏರಿಕೆಯಾಗುತ್ತದೆ. ಜೊತೆಗೆ ಪ್ರಸಂಗದ ಪಾತ್ರ ನಿರ್ಧರಿಸುವ ಅಧಿಕಾರವನ್ನೂ ಆ ಸ್ಥಾನದ ವೇಷಧಾರಿಗಳು ಪಡೆದುಕೊಳ್ಳುತ್ತಾರೆ. ಆದರೆ ರಂಗದಲ್ಲಿ ಇಂತಹ ವ್ಯವಸ್ಥೆಗಳು ಪ್ರೇಕ್ಷಕನ ಮೇಲೆ ಯಾವ ಪ್ರಭಾವವನ್ನೂ ಬೀರಲಾರವು. ಪ್ರೇಕ್ಷಕ ನೋಡಬರುವುದು, ಕಲಾವಿದನ ಪಾತ್ರನಿರ್ವಹಣೆ ಹಾಗೂ ಪ್ರದರ್ಶನವನ್ನು. ಪಾತ್ರದಲ್ಲಿ ಕಲಾವಿದನ ತೊಡಗಿಸಿಕೊಳ್ಳುವಿಕೆ ಹೇಗಿರುತ್ತದೋ ಅದರ ಮೇಲೆ ಮೆಚ್ಚುಗೆ, ಗುರುತಿಸುವಿಕೆ ಹೆಚ್ಚಾಗುತ್ತದೆ. ಪಾತ್ರ ಚಿಕ್ಕದಿರಲಿ, ದೊಡ್ಡದಿರಲಿ, ರಂಗದ ನಿರ್ವಹಣೆಯೇ ಜನಾನುರಾಗಕ್ಕೆ ಕಾರಣವಾಗುವಂಥದ್ದು. ಕಲಾವಿದನಾದವನಿಗೆ ಮೇಳದಲ್ಲಿ ಪ್ರತಿದಿನವೂ ಕಲಿಯುವಂಥದ್ದಿದೆ. ಆದರೆ ಚೌಕಿಯ ವಾತಾವರಣ ಎಂದಿಗೂ ಕಲಾವಿದನ ಬೆಳವಣಿಗೆಗೆ ಪೂರಕವಾಗುವಂತಿರಬೇಕು. ಅಲ್ಲಿ ಸಮಸ್ಯೆಗಳಾದಾಗ ಕೆಲವೊಮ್ಮೆ ಅದು ಪಾತ್ರದ ಮೇಲೆ ಪ್ರಭಾವ ಬೀರುವುದೂ ಇದೆ. ರಂಗ ನಿರ್ವಹಣೆ ಬಡವಾಗುತ್ತದೆ. ಇದಾಗಬಾರದು ಎಂಬ ಬದ್ಧತೆ ಮೇಳದ ಪ್ರತಿಯೊಬ್ಬ ಕಲಾವಿದನಲ್ಲೂ ಇರಬೇಕಾಗುತ್ತದೆ. ಹಿರಿಯ ಕಲಾವಿದರೂ ನಂತರದ ಕಲಾವಿದರನ್ನು ಬೆಳೆಸುವಲ್ಲಿ ಪೂರ್ವಾಗ್ರಹವಿಲ್ಲದೆ ಅವಕಾಶ ಮಾಡಿಕೊಡಬೇಕು. ಅದನ್ನು ಹೊರತುಪಡಿಸಿ ತಾನೊಬ್ಬನೇ ಕಾಣಿಸಿಕೊಳ್ಳಬೇಕೆಂಬ ಉದ್ದೇಶ ಒಟ್ಟು ಮೇಳದ ಹಿತದೃಷ್ಟಿಯಿಂದ ಆರೋಗ್ಯಕರವಲ್ಲ. ಈ ದೂರದೃಷ್ಟಿತ್ವವನ್ನು ಹೊಂದಿರುವ ಯಜಮಾನರುಗಳಾದರೆ ಇಂತಹ ಸಂದರ್ಭಗಳನ್ನು ಸಮರ್ಥವಾಗಿ ನಿಭಾಯಿಸುತ್ತಾರೆ. ಇಲ್ಲದೇ ಹೋದರೆ ಕಲಾವಿದ ಬೇರೆ ಮೇಳದತ್ತ ಮುಖ ಮಾಡುವುದು ಸಹಜವೇ. ಕಲಾವಿದನಾದವನು ತನ್ನ ಸಮಸ್ಯೆಗಳೇನೇ ಇದ್ದರೂ ಅದನ್ನೆಲ್ಲ ಮರೆತು ರಂಗದಲ್ಲಿ ಜನರನ್ನು ರಂಜಿಸುವುದೇ ಅವನ ಮುಖ್ಯ ಉದ್ದೇಶ ಹಾಗೂ ಉತ್ತಮ ಕಲಾವಿದನ ಲಕ್ಷಣವೂ ಹೌದು. ಹಾಗಾಗಿ ಆತ ಎಲ್ಲೇ ಇದ್ದರೂ ಯಾವುದೇ ಮೇಳದಲ್ಲಿದ್ದರೂ ರಂಗದ ಹಿಂದಿನ ಎಲ್ಲ ವಿಷಮತೆಗಳನ್ನು ಮರೆತು ಪಾತ್ರನಿರ್ವಹಣೆಯಲ್ಲಿ ತನ್ನನ್ನು ತಾನು ಬೆಳೆಸಿಕೊಳ್ಳುವಲ್ಲಿ ಗಮನ ಹರಿಸಿದರೆ ಸಾಕು.

***ನಿಮ್ಮವನೇ, ಗೋವಿಂದ ವಂಡಾರು***

***ನಿಮಗಿದು ಗೊತ್ತೇ?*** *– ಯಕ್ಷಗಾನದಲ್ಲಿ ಶಿವಶರಣರ ಅಧ್ಯಾತ್ಮಿಕತೆಯನ್ನು ಯಕ್ಷಗಾನ ಪ್ರಸಂಗವಾಗಿ ಬರೆದವರು ಹೊಸ್ತೋಟ ಮಂಜುನಾಥ ಭಾಗವತರು. ಕೆಲವೊಂದು ಮಾರ್ಪಾಟುಗಳೊಂದಿಗೆ ಬಸವತತ್ವವನ್ನೊಳಗೊಂಡ ಶ್ರೀ ಬಸವೇಶ್ವರ ಚರಿತೆ ಪ್ರಸಂಗವನ್ನು ದತ್ತಮೂರ್ತಿ ಭಟ್ ಎನ್ನುವವರು ಹಲವಾರು ಬಾರಿ ರಂಗ ಪ್ರದರ್ಶನ ಮಾಡಿದ್ದಾರೆ. ಅಲ್ಲದೆ ಅವರು ಸಾಂಸ್ಕೃತಿಕ ಸಾಧಕರನ್ನು ಗೌರವಿಸಿ ಯಕ್ಷ ಬಸವ ಎಂಬ ಪ್ರಶಸ್ತಿ ನೀಡುತ್ತಾ ಬಂದಿದ್ದಾರೆ. ಯಕ್ಷ ಬಸವ ಪ್ರಶಸ್ತಿ ಪಡೆದ ಕೆಲವು ಸಾಧಕರ ಹೆಸರು ಹೀಗಿವೆ– ಏಣಗಿ ಬಾಳಪ್ಪ, ಭದ್ರಗಿರಿ ಅಚ್ಯುತ ದಾಸ, ಕೆ.ಎಸ್.ಎಲ್.ಸ್ವಾಮಿ, ಚಿಟ್ಟಾಣಿ ರಾಮಚಂದ್ರ ಹೆಗಡೆ, ಸಾಣೇಹಳ್ಳಿ ಪಂಡಿತಾರಾಧ್ಯ ಶ್ರೀ, ಉಡುಪಿ ಯಕ್ಷಗಾನ ಕೇಂದ್ರ*

**ಸಂಪಾದಕೀಯ**

*ಆತ್ಮೀಯ ಓದುಗರೆ,*

**ರಾ**ಜ್ಯದ ಮೊದಲ ಸಮಗ್ರ ಕರ್ನಾಟಕ ಯಕ್ಷಗಾನ ಸಮ್ಮೇಳನ(2023) ಫೆಬ್ರವರಿ 11 ಮತ್ತು 12ರಂದು ಉಡುಪಿಯ ಎಂಜಿಎಂ ಕಾಲೇಜಿನಲ್ಲಿ ನಡೆಯಲಿದ್ದು ಸಮ್ಮೇಳನದ ಅಧ್ಯಕ್ಷರಾಗಿ **ಡಾ. ಎಂ. ಪ್ರಭಾಕರ ಜೋಶಿ** ಆಯ್ಕೆಯಾಗಿದ್ದಾರೆ. ಯಕ್ಷಗಾನ ಮುಂದೆ ನಡೆಯಬೇಕಾದ ಹಾದಿಯ ಬಗ್ಗೆ ದೂರದೃಷ್ಟಿತ್ವವನ್ನು ಹೊಂದಿರುವ ಸಮರ್ಥ ವಿದ್ವಾಂಸ ಜೋಶಿಯವರನ್ನು **ನಾದನೂಪುರ ಪತ್ರಿಕೆ** ಮಾತನಾಡಿಸಿದೆ. ಸಮ್ಮೇಳನಾಧ್ಯಕ್ಷರಾಗಿ ಸಮ್ಮೇಳನದ ಕುರಿತ ಅವರ ಆಶಯಗಳು ಈ ಮಾಸಿಕದ ಮುಖ್ಯ ಲೇಖನದಲ್ಲಿ ಪ್ರಕಟವಾಗಿದೆ. ಯಕ್ಷಗಾನದ ಬಹುಶ್ರುತ ವಿದ್ವಾಂಸರಾಗಿರುವ ಜೋಶಿಯವರ ಕಿರು ಪರಿಚಯ ಹೀಗಿದೆ. ಯಕ್ಷಗಾನ ಕ್ಷೇತ್ರ ಕಂಡ ಕೆಲವೇ ಶ್ರೇಷ್ಠ ವಿದ್ವಾಂಸ, ತಾಳಮದ್ದಲೆಯ ವಾಗ್ವಟುಗಳಲ್ಲಿ ಡಾ. ಪ್ರಭಾಕರ್ ಜೋಶಿ ಒಬ್ಬರು. ಡಾ. ಜೋಶಿ, ನಿವೃತ್ತ ಪ್ರಾಂಶುಪಾಲ, ಪ್ರಸಿದ್ಧ ಅರ್ಥಧಾರಿ, ಸೊಗಸಿನ ಭಾಷಣಗಾರ. ಕೃಷ್ಣ ಸಂಧಾನ ಪ್ರಸಂಗ ಮತ್ತು ಪ್ರಯೋಗ ಎಂಬ ಸಂಶೋಧನಾ ಮಹಾಪ್ರಬಂಧಕ್ಕೆ ಗೌರವ ಡಾಕ್ಟರೇಟ್ ಪಡೆದ ಹಿರಿಯ ವಿದ್ವಾಂಸ. ಯಕ್ಷಗಾನದ ಪರಂಪರೆ, ಅದು ನಡೆದು ಬಂದ ದಾರಿ, ಇತ್ತೀಚೆಗೆ ಬದಲಾವಣೆಗೊಂಡ ಕೆಲವು ಸಂಪ್ರದಾಯಗಳ ಸಾಧಕ ಬಾಧಕಗಳ ಅಪಾರ ಜ್ಞಾನ ಹೊಂದಿರುವ ಜೋಷಿ ಶ್ರೇಷ್ಠ ವಿಮರ್ಶಕರು. ದೇಶ ವಿದೇಶಗಳಲ್ಲಿ ನೂರಾರು ಯಕ್ಷಗಾನ ಕಮ್ಮಟಗಳಲ್ಲಿ ಭಾಗವಹಿಸಿರುವ ಜೋಷಿಯವರು ಯಕ್ಷಗಾನದ ನಡೆದಾಡುವ ವಿಶ್ವಕೋಶ ಅನ್ನೋದ್ರಲ್ಲಿ ಅತಿಶಯೋಕ್ತಿ ಇಲ್ಲ. ಇವರು ಹುಟ್ಟಿದ್ದು ಕಾರ್ಕಳ ತಾಲೂಕಿನ ಮಾಳ ಗ್ರಾಮದಲ್ಲಿ ಜೂನ್ 2 1946ರಲ್ಲಿ. ಡಾ. ಪ್ರಭಾಕರ್ ಜೋಶಿಯವರ ಆಳವಾದ ಪಾಂಡಿತ್ಯಕ್ಕೆ ಅವರು ಬೆಳೆದು ಬಂದ ಪರಿಸರದ ಪ್ರಭಾವವೂ ಇದೆ. ಡಾ. ಜೋಶಿ, ಧಾರವಾಡ ವಿಶ್ವವಿದ್ಯಾನಿಲಯದಿಂದ ಎಂಕಾಂ ಪದವಿ, ಹಿಂದಿಯಲ್ಲಿ ಅಲಹಾಬಾದ್ ಯುನಿವರ್ಸಿಟಿಯಿಂದ ಸಾಹಿತ್ಯ ರತ್ನ ಪದವಿ, ಮಂಗಳೂರು ವಿಶ್ವವಿದ್ಯಾನಿಯದಿಂದ ಯಕ್ಷಗಾನ ಪ್ರಬಂಧಕ್ಕೆ ಡಾಕ್ಟರೇಟ್ ಪದವಿ ಪಡೆದುಕೊಂಡಿದ್ದಾರೆ. 33 ವರ್ಷಗಳ ಕಾಲ ಬೋಧಕ ವೃತ್ತಿಯಲ್ಲಿ ಅಪಾರ ಅನುಭವ ಪಡೆದುಕೊಂಡಿದ್ದಾರೆ. ಜೋಶಿಯವರು ಡಾ. ಶಿವರಾಮ ಕಾರಂತರ ನಂತರ ಗುರುತಿಸಿಕೊಳ್ಳುವ ಯಕ್ಷಗಾನ ವಿಮರ್ಶಕ, ಸಂಶೋಧಕ. ಇವರು ಸುಮಾರು 5 ದಶಕಗಳ ಕಾಲ ಯಕ್ಷಗಾನ ಕಲೆಯಲ್ಲಿ ಅರ್ಥಧಾರಿ, ವಿಮರ್ಶಕ, ಸಂಘಟಕರಾಗಿ ದುಡಿದಿದ್ದಾರೆ. 50 ವರ್ಷಗಳಿಗೂ ಮಿಗಿಲಾಗಿ ಅರ್ಥಧಾರಿಯಾಗಿ ಖ್ಯಾತಿ ಪಡೆದಿದ್ದಾರೆ. ಕಥೆ ಮತ್ತು ಪ್ರಸಂಗ ಸನ್ನಿವೇಶದ ಮೇಲೆ ಆಳವಾದ ಹಿಡಿತವನ್ನು ಹೊಂದಿದ್ದಾರೆ ಉತ್ತಮ ಸಂವಹನ ಕೌಶಲ್ಯ, ಭಾವ ಮತ್ತು ಭಾವನೆಗಳ ಮೇಲಿನ ಹಿಡಿತ, ಅತ್ಯುತ್ತಮ ತಾರ್ಕಿಕ ಸಾಮರ್ಥ್ಯ ಅವರನ್ನು ವಿಶಿಷ್ಟವಾಗಿ ಗುರುತಿಸುವಂತೆ ಮಾಡಿದೆ. ಡಾ. ಯು.ಆರ್. ಅನಂತಮೂರ್ತಿ ಮತ್ತು ಪ್ರೊಫೆಸರ್ ಕೆ.ಎಸ್. ಹರಿದಾಸ್ ಭಟ್ "**ಡಾ. ಜೋಶಿ ಉತ್ತಮ ಭಾಷಣಕಾರರು**" ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಪ್ರೊಫೆಸರ್ ಅಮೃತ್ ಸೋಮೇಶ್ವರ ಜೋಶಿಯವರನ್ನು ನಮ್ಮ ಪ್ರದೇಶದ **'ಸಾಂಸ್ಕೃತಿಕ ವಕ್ತಾರ'** ಎಂದು ಕರೆದಿದ್ದಾರೆ. ಕಬ್ಬಿನಾಲೆ ವಸಂತ ಬಾರಧ್ವಾಜ್ ರವರು "**ಪ್ರಭಾಕರ್ ಜೋಶಿ ಯಕ್ಷಗಾನದ ಮಾಹಿತಿಯ ಕಣಜ**" ಎಂದಿದ್ದಾರೆ. ಇನ್ನು ಡಾ. ಜೋಶಿಯವರಿಗೆ ಪಾರ್ತಿಸುಬ್ಬ ಪ್ರಶಸ್ತಿ, ಯಕ್ಷಗಾನದಲ್ಲಿ ಜೀವಮಾನದ ಸಾಧನೆಗೆ ವಿಶೇಷ ಪ್ರಶಸ್ತಿ, ಶೇಣಿ ಪ್ರಶಸ್ತಿ ಸೇರಿದಂತೆ ಸುಮಾರು 59 ಕ್ಕೂ ಹೆಚ್ಚು ಪ್ರಶಸ್ತಿ ಗೌರವ ಸನ್ಮಾನಗಳು ಅವರ ಮುಡಿ ಸೇರಿವೆ. ಈ ಎಲ್ಲ ಸಾಧನೆಗಳಿಗೆ ಭೂಷಣವಾಗಿಯೇ ಯಕ್ಷಗಾನ ಸಮ್ಮೇಳನದ ಅಧ್ಯಕ್ಷ ಪಟ್ಟ ಇವರಿಗೆ ಒದಗಿ ಬಂದಿರೋದ್ರಲ್ಲಿ ಆಶ್ಚರ್ಯವಿಲ್ಲ. ಜೋಶಿಯವರ ಅಧ್ಯಕ್ಷತೆಯಲ್ಲಿ ಯಕ್ಷಗಾನದ ವಿವಿಧ ವಿಭಾಗ, ಪ್ರಕಾರಗಳ ಸವಾಲು ಹಾಗೂ ಗೊಂದಲಗಳಿಗೆ ಸೂಕ್ತ ಮಾರ್ಗವನ್ನು ಈ ಸಮ್ಮೇಳನ ಹಾಕಿಕೊಡಲಿ ಎಂಬುದು ನಮ್ಮ ಆಶಯ. –
**ಶುಭಾಶಯ**

# ಯಕ್ಷಗಾನ ಸಮ್ಮೇಳನ– ಅಧ್ಯಕ್ಷರ ಮನದಾಳ

*ಕಲೆಯ ಪ್ರಯೋಗಕ್ಕೋ, ಬದಲಾವಣೆಗೋ ವಿಮರ್ಶಾತ್ಮಕವಾದ ಮಾನದಂಡ ಅಗತ್ಯ. ಸಮ್ಮೇಳನದಲ್ಲಿ ಅವುಗಳ ಪರಿಶೀಲನೆಯು ನಡೆಯಲಿದೆ* – **ಡಾ. ಜೋಶಿ**

***ಪ್ರಶ್ನೆ: ಯಕ್ಷಗಾನ ಸಮ್ಮೇಳನಕ್ಕೆ ತಾವು ಆಯ್ಕೆಯಾಗಿದ್ದು ಹೇಗೆ? ಈ ಜವಾಬ್ದಾರಿಯನ್ನು ನೀವು ಒಪ್ಪಿಕೊಳ್ಳಲು ಪ್ರಮುಖವಾದ ಕಾರಣ ಏನು?***



**ಡಾ. ಜೋಶಿ:** ಆಯ್ಕೆ ಪ್ರಕ್ರಿಯೆ ಎನ್ನುವುದು ಆಯ್ಕೆಯ ಸಮಿತಿಗೆ ಸಂಬಂಧಿಸಿದ ವಿಚಾರ. ಅದಕ್ಕಾಗಿಯೇ ಸಂಸ್ಕೃತಿ ಇಲಾಖೆ, ಸಂಘಟನಾ ಸಮಿತಿ ಇದೆ. ಅವರು ನನಗೆ ದೊಡ್ಡ ಗೌರವ ಕೊಟ್ಟಿದ್ದಾರೆ ಅದನ್ನು ನಾನು ಸ್ವೀಕರಿಸಿದ್ದೇನೆ. ಬೇರೆ ಅರ್ಹರೂ ಇರಬಹುದು. ಬೇರೆ ಬೇರೆ ಪರಿಗಣನೆಯಿಂದ ನನ್ನನ್ನು ಆಯ್ಕೆ ಮಾಡಿಬಹುದು ಎಂದು ಭಾವಿಸ್ತೇನೆ. ಸಾಹಿತ್ಯ ಸಹಿತ ಯಕ್ಷಗಾನದಲ್ಲಿ ವಿವಿಧ ವಿಭಾಗಗಳಿವೆ. ಯಕ್ಷಗಾನವನ್ನು ಕೇವಲ ಸಾಹಿತ್ಯವಾಗಿ ನೋಡಲು ಆಗುವುದಿಲ್ಲ. ಇದು ಕಲೆಯೂ ಹೌದು, ಹಿಮ್ಮೇಳ, ಮುಮ್ಮೇಳ, ಸಂಘಟನೆ ಹೀಗೆ ಹತ್ತಾರು ವಿಷಯಗಳಿದೆ ಅದರಲ್ಲಿ. ಅದರ ಕೆಲ ಅಂಶಗಳನ್ನು ಆಯ್ದು ಮುಖ್ಯವಾಗಿ ಸಾಂಕೇತಿಕವಾದಂತಹಾ ಸಂದರ್ಭ ಇದು. ಇದು ನನಗೆ ಒಬ್ಬನಿಗೆ ಸಿಕ್ಕಿದ ಅಧ್ಯಕ್ಷತೆ ಅಲ್ಲ, ಇಡೀ ಯಕ್ಷಗಾನ ಸಮುದಾಯಕ್ಕೆ ಸಿಕ್ಕ ಮಾನ್ಯತೆಯನ್ನು ನಾನು ಸ್ವೀಕರಿಸಿದ್ದೇನೆ.

***ಪ್ರಶ್ನೆ: ಈ ಸಮ್ಮೇಳನದ ಅಧ್ಯಕ್ಷರಾಗಿ ಯಕ್ಷಗಾನ ಕ್ಷೇತ್ರದ ಅಭಿವೃದ್ಧಿಗೆ ಸಂಬಂಧಿಸಿದಂತೆ ನಿಮ್ಮ ಪ್ರಯಾರಿಟಿಗಳೇನು?***

**ಡಾ. ಜೋಶಿ:** ಇದನ್ನು ಆ ರೀತಿಯಾಗಿ ನೋಡಲು ಆಗಲಾರದು. ರೆಸೊಲ್ಯುಷನ್ ಬಂದ ಹಾಗೆ ಪಾಸ್ ಮಾಡೋದು ನನ್ನ ಕರ್ತವ್ಯ ಆಗಿರುತ್ತದೆ. ನಾನು ಮುಖ್ಯವಾಗಿ ಅಧ್ಯಕ್ಷೀಯ ಭಾಷಣ ಮಾಡಲಿಕ್ಕಿದೆ. ಯಕ್ಷಗಾನ ರಂಗ ಮುಂದೆ ಹೇಗೆ ಸಾಗಬೇಕು ಈಗ ಹೇಗಿದೆ ಎಂಬುದರ ಬಗ್ಗೆ ಐತಿಹಾಸಿಕ ನೋಟವನ್ನು ಕೊಟ್ಟು ಮುಂದೆ ಹೇಗೆ ಎಂಬುದರ ಬಗ್ಗೆ ಮಾರ್ಗದರ್ಶಿಯಾಗುವಂತಹ ಭಾಷಣ ಮಾಡಬೇಕಿದೆ.

ವ್ಯವಸಾಯ ರಂಗಭೂಮಿ ಸ್ವತಂತ್ರ. ಕಲಾವಿದರ ಮೇಲೆ ನಮಗೇನೂ ಹಿಡಿತ ಇಲ್ಲ. ಅದನ್ನು ಸಂಸ್ಕೃತಿ ಇಲಾಖೆ ಹಿಡಿತಕ್ಕೆ ತರುವ ಪ್ರಶ್ನೆಯೂ ಅಲ್ಲ. ಒಂದು ಚರ್ಚೆಗೆ ವಿಷಯಗಳನ್ನು ಒಡ್ಡುವಂಥದ್ದು. ಹೇಗೆ ಮುಂದೆ ಅದರ ವೇಷಭೂಷಣ ಹಿಮ್ಮೇಳ ಸಂಘಟನೆ ಪ್ರೋತ್ಸಾಹ ಸಹಕಾರ ಮಾಡಬೇಕಾದ ಕೆಲಸ ಇಂತಹಾ ವಿಚಾರಗಳಲ್ಲಿ ಏನು ಮಾಡಬಹುದು ಎಂದು ವಿದ್ವಾಂಸರು ಮಂಡಿಸ್ತಾರೆ. ಮಂಡನೆಗಳನ್ನು ಒಟ್ಟುಗೂಡಿಸಿ ಪರಿಶೀಲಿಸಿ, ಮುಂದೆ ಹೇಗೆ ಎಂಬುದಾಗಿ ನಾನೂ ಕೆಲವು ವಿಷಯಗಳನ್ನು ಮಂಡಿಸುವವನಿದ್ದೇನೆ. ಈಗಾಗಲೇ ಹೇಳಿದ ಹಾಗೆ ಇದರಲ್ಲಿ 3 ವಿಷಯಗಳಿವೆ. ಒಂದು ಕಲೆಯ ಅಭಿಮಾನವನ್ನು ವಿಸ್ತರಿಸುವ ಪ್ರಚೋದಿಸುವ, ಜನರಲ್ಲಿ ಅಭಿಮಾನವನ್ನು ಉಂಟು ಮಾಡುವ ವಾತಾವರಣ. ಫೆಸ್ಟಿವಲ್ ಕೂಡಾ ಇದೆ ಇದರಲ್ಲಿ. ಇನ್ನೊಂದು ಅಭಿಯಾನ, ಯಕ್ಷಗಾನದಲ್ಲಿ

ಮುಂದೆ ಏನಾಗಬೇಕು, ಎಂಬುದು. ಮೂರನೆಯದು ಅಭಿಜ್ಞಾನ– ಯಕ್ಷಗಾನದಲ್ಲಿ ಏನಾಗಿದೆ ಏನಾಗಬೇಕು ಎಂಬುದಾಗಿ ಕಲೆಯನ್ನು ನೆನಪಿಟ್ಟುಕೊಂಡು ಬರೇ ಶ್ರೇಷ್ಠವಾದ ಕಲೆ, ಅದ್ಭುತವಾದ ಕಲೆ ಎಂದು ಹೇಳುವುದಕ್ಕಿಂತ ಅಲ್ಲಿರುವ ಸಮಸ್ಯೆಗಳೇನು? ಅದೊಂದು ಶೈಲಿ ಬದ್ಧವಾದ ಕಲೆಯಾದ್ದರಿಂದ ಅದನ್ನು ಹೇಗೆ ನಡೆಸಬೇಕು, ಹೇಗೆ ತಗೊಳ್ಳೋದು. ಕಲೆಗೆ ವಸ್ತು ಹೇಗೆ? ಶೈಲಿ ಹೇಗೆ? ಕಲೆಯಲ್ಲಿ ಪ್ರಯೋಗವೋ ಬದಲಾವಣೆಯೋ ಆಗುವುದಿದ್ದರೆ ಅದಕ್ಕೆ ಪಾರಾಮೀಟರ್ಸ್ ಏನು ಎಂಬುದಾಗಿ ವಿಮರ್ಶಾತ್ಮಕವಾದ ಮಾನದಂಡಗಳ ಮೇಲೆ ನಾವು ನೋಡಬೇಕಾಗುತ್ತದೆ. ಈ ಎಲ್ಲಾ ವಿಷಯಗಳನ್ನು ನಾವು ಅಲ್ಲಿ ಪರಿಶೀಲನೆ ಮಾಡಲಿದ್ದೇವೆ.



***ಪ್ರಶ್ನೆ: ಸಮ್ಮೇಳನ ಮುಗಿದ ಬಳಿಕ ಇದರಿಂದ ಕಲಾಕ್ಷೇತ್ರದಲ್ಲಿ ಯಾವ ಬದಲಾವಣೆಗಳನ್ನು ನಾವು ನಿರೀಕ್ಷೆ ಮಾಡಬಹುದು?***

**ಡಾ. ಜೋಶಿ:** ಕೂಡಲೇ ಬದಲಾವಣೆ ಸಾಧ್ಯವಿಲ್ಲ. ಅಧ್ಯಕ್ಷ ಭಾಷಣದಲ್ಲಿರುವ ಎಲ್ಲವನ್ನೂ ನಾನು ಈಗ ಹೇಳಲಿಕ್ಕೂ ಆಗುವುದಿಲ್ಲ. ಮೊದಲನೆಯದು ಯಕ್ಷಗಾನ ರಂಗಭೂಮಿಯಲ್ಲಿರುವ ಸಮಸ್ಯೆಗೇನು? ಎಂಬುದನ್ನು ಅರಿತುಕೊಳ್ಳಲು ಸಾಧ್ಯವಾಗುತ್ತದೆ. ಜೊತೆಗೆ ಭಾವನಾತ್ಮಕವಾಗಿ ಯಕ್ಷಗಾನದೊಟ್ಟಿಗೆ ಬೆಸೆದುಕೊಳ್ಳುವ ರೀತಿಯಲ್ಲಿ ಕಲಾವಿದರು ಮತ್ತು ಕಲಾಭಿಮಾನಿಗಳನ್ನು ಜೋಡಿಸುವುದು. ಈ ಥರದ ಸಮ್ಮೇಳನದಿಂದ ಜಿನುಗಿದ ಜಿನುಗು ಪರಿಣಾಮ, ಅರಿವಿನ ಮತ್ತು ಎಚ್ಚರದ ಪ್ರಜ್ಞೆ ವಿಸ್ತರಿಸಿ ನಿಧಾನವಾಗಿ ಯಕ್ಷಗಾನ ರಂಗದಲ್ಲಿ ಬದಲಾವಣೆಗಳಾಗಬೇಕು ಪರಿಣಾಮಗಳಾಗಬೇಕು. ಸಮ್ಮೇಳನಗಳು ಹಿಂದೆಯೂ ಆಗಿವೆ, ಉತ್ಸವಗಳೂ ಆಗಿವೆ. ಡಾ. ಕಾರಂತರು 1958 ರಲ್ಲಿಯೇ ಗೋಷ್ಠಿಗಳನ್ನು ನಡೆಸಿದ್ದರು. ಅದಕ್ಕಿಂತಲೂ ಮೊದಲು 1936ನೇ ಇಸವಿಯಿಂದಲೇ ಇಂತಹ ಸಮ್ಮೇಳನಗಳು ನಡೆದಿವೆ. ಅದಕ್ಕೆ 89 ವರ್ಷಗಳ ಇತಿಹಾಸವಿದೆ. ಜಗತ್ತಿನಲ್ಲಿ ಬೇರೆಬೇರೆ ಕಲೆಗಳಿದ್ದಾವೆ. ಅವು ಹೇಗೆ ಪ್ರಗತಿ ಸಾಧಿಸಿದ್ದಾವೆ. ಯಕ್ಷಗಾನದ ಪ್ರಗತಿಗೆ ನಾವು ಏನು ಮಾಡ್ಬೇಕು? ನಾವು ನಮ್ಮ ಕಲೆಯನ್ನು ಉನ್ನತೀಕರಣ ಮಾಡಲು ಪ್ರಸರಣಗೊಳಿಸಲು ಮತ್ತು ಬೇರೆಬೇರೆ ಲೆವೆಲ್ ನಲ್ಲಿ ರಾಜ್ಯ, ರಾಷ್ಟ್ರ, ಅಂತರಾಷ್ಟ್ರೀಯ ಮಟ್ಟದಲ್ಲಿ ಇದನ್ನು ಪ್ರಾಜೆಕ್ಟ್ ಮಾಡಲು ಏನೆಲ್ಲಾ ಮಾಡಬೇಕು? ಇಂತಹ ಯೋಚನೆಗಳು ಇಂತಹ ಸಮ್ಮೇಳನದಿಂದ ಸಾಧ್ಯ. ಎರಡು ದಿನದ ಸಮ್ಮೇಳನದಲ್ಲಿ ಏನೂ ಆಗುವುದಿಲ್ಲ. ಸರಣಿಯಾಗಿ ಅದರ ಫಾಲೋ ಅಪ್ ಗೋಷ್ಠಿಗಳು ಚಿಂತನೆಗಳು ನಡೆಯಬೇಕು. ಈ ಸಮ್ಮೇಳನ ಅದಕ್ಕೊಂದು ಚಾಲನೆ ಅಷ್ಟೆ.

***ಪ್ರಶ್ನೆ: ಯಕ್ಷಗಾನದ ವಿವಿಧ ವಿಭಾಗ ಪ್ರಕಾರಗಳ ಅಧ್ಯಯನ, ಸಮ್ಮೇಳನ, ಸಂಘಟನೆಗಳನ್ನು ನೀವೇ ಹೇಳಿದಂತೆ ಖಾಸಗಿ ಸಂಸ್ಥೆಗಳು ಸಾಕಷ್ಟು ಕೆಲಸ ಮಾಡಿದ್ದಾವೆ. ಯಕ್ಷಗಾನ ಉಚ್ಛ್ರಾಯ ಸ್ಥಿತಿಯಲ್ಲಿರುವಾಗ ಇಂತಹ ಸಮ್ಮೇಳನ ಸರ್ಕಾರದಿಂದ ನಡೆಸಲ್ಪಡುತ್ತಿರುವುದು ಎಷ್ಟು ಪ್ರಾಮುಖ್ಯ ಎಂದೆನಿಸುತ್ತದೆ ನಿಮಗೆ?***

**ಡಾ. ಜೋಶಿ:** ಉಚ್ಛ್ರಾಯ ಸ್ಥಿತಿಯಲ್ಲಿರೋವಾಗ್ಲೇ ಸಮ್ಮೇಳನಗಳು ಆಗಬೇಕು. ಯಕ್ಷಗಾನ ಸಂಖ್ಯಾಮಾನದಲ್ಲಿ ಉನ್ನತವಾಗಿ ಹಾಗೂ ಕಮರ್ಶಿಯಲ್ ಆಗಿ ಇರಬಹುದು. ಆದ್ರೆ ರಂಗಭೂಮಿಯಲ್ಲಿ ಅನೇಕ ಸಮಸ್ಯೆಗಳೂ ಇದ್ದಾವೆ,

ಯಕ್ಷಗಾನವನ್ನು ಕಲಾ ದೃಷ್ಟಿಯ ವಿಮರ್ಶಕರು ನೋಡುವುದು ಬೇರೆ, ಮುಗ್ಧವಾಗಿ ಖುಷಿಯಿಂದ ನೋಡುವುದು ಬೇರೆ. ರಂಗದಲ್ಲಿ ಅನೌಚಿತ್ಯಗಳು ದಿನದಿನ ಬರುತ್ತವೆ. ಎಷ್ಟೋ ವಿಷಯದಲ್ಲಿ ಶೈಲಿ ಬದಲಾಗಿದೆ ಕೆಟ್ಟು ಹೋಗಿದೆ. ಯಕ್ಷಗಾನ ಎಷ್ಟೇ ಪ್ರಸಿದ್ಧವಾದರೂ ಒಳಗಿನಿಂದ ಅದರದೇ ಆದ ಗಂಭೀರವಾದ ಸಮಸ್ಯೆಗಳನ್ನು ಎದುರಿಸ್ತಾನೇ ಇವೆ. ಆದ್ರಿಂದ ಅವುಗಳ ಚರ್ಚೆ ಯಾವಾಗ್ಲೂ ಬೇಕು ಮತ್ತು ರಂಗಭೂಮಿಯ ನಿಜವಾದ ಅರ್ಥದ ಉಚ್ಛ್ರಾಯ ಸ್ಥಿತಿ ಸಾಧಿಸಲ್ಪಡಬೇಕು. ಇದು ಸತತವಾಗಿ ಆಗಬೇಕಾದ ಕೆಲಸ. ಈ ಸಮ್ಮೇಳನದಿಂದ ಸ್ಫೂರ್ತಿ ಪಡೆದು ಒಂದು ಹೊಸ ಎಚ್ಚರ ಜಾಗೃತೆ ನಿರ್ಮಾಣ ಆಗಬೇಕು.

***ಪ್ರಶ್ನೆ: ಕಲಾವಿದರ ಮತ್ತು ವಿದ್ವಾಂಸರ ನಡುವೆ ಒಂದು ಗ್ಯಾಪ್ ಇದೆ. ಕಲಾವಿದ ಮತ್ತು ವಿಮರ್ಶಕರನ್ನು ಬೆಸೆಯುವಂತಹಾ ಪ್ರಯತ್ನ ಈ ಸಮ್ಮೇಳನದಲ್ಲಿ ಎಷ್ಟರ ಮಟ್ಟಿಗೆ ನಡೆಯುತ್ತೆ?***

**ಡಾ. ಜೋಶಿ:** ಕಲಾವಿದರ ಮತ್ತು ವಿಸ್ವಾಂಸರ ಒಟ್ಟುಗೂಡುವಿಕೆ ನಡೆದಿಲ್ಲ ಎಂದಿಲ್ಲ. ನಡೆದಿದೆ. ಪ್ರತೀ ಗೋಷ್ಠಿಯಲ್ಲೂ ಕಲಾವಿದರನ್ನು ಕರೆದಿದ್ದೇವೆ. ಎಷ್ಟೋ ಕಡೆ ಕಲಾವಿದರೆ ಸ್ವತಃ ಪ್ರಬಂಧಗಳನ್ನು ಮಂಡಿಸಿದ್ದಾರೆ. ವಿಚಾರ ಮಂಡನೆ ಮಾಡಿದ್ದಾರೆ. ಆದ್ರೆ ಯಕ್ಷಗಾನ ವ್ಯವಸಾಯ ಹೇಗಿದೆ ಎಂದರೆ ಕಲಾವಿದರನ್ನೆಲ್ಲ ಕರೆಯಬೇಕೆಂದರೆ ಇಡೀ ಬೇಸಗೆಯಲ್ಲಿ ನಾವು ಸಮ್ಮೇಳನವನ್ನು ಮಾಡುವ ಹಾಗೇ ಇಲ್ಲ. ನಿಜವಾಗಿ ಈ ಸಮ್ಮೇಳನ ಮಳೆಗಾಲದಲ್ಲಿ ಮಾಡಬೇಕು. ಬೇಸಗೆಯಲ್ಲಿ ಇಡೀ ಸೀಸನ್ ತಿರುಗಾಟ ಇರ್ತದೆ. ಕಲಾವಿದರಲ್ಲಿ ಕೆಲವರು ಆಸಕ್ತರಿದ್ದಾರೆ. ಆಸಕ್ತಿ ಇದ್ದರೂ ಬರಲು ಸಾಧ್ಯವಾಗದವರೂ ಇದ್ದಾರೆ. ಅನೇಕ ಕಲಾವಿದರು ಅಲ್ಲಿ ಬಂದು ಕೂತ್ರೆ ಮೇಳಕ್ಕೆ ರಜೆ ಮಾಡಬೇಕು. ಅವರಿಗೆ ರಜೆ ಮಾಡಲು ಆಗುವುದಿಲ್ಲ. ಮಳೆಗಾಲದಲ್ಲೂ ಸೀಸನ್ ಇರುತ್ತದೆ. ಮತ್ತೆ ಕಲಾವಿದರೂ ಇಂತಹ ಸಮ್ಮೇಳನಗಳಲ್ಲಿ ಭಾಗವಹಿಸುವ ಪ್ರಯತ್ನ ಮಾಡ್ಬೇಕು. ಯಜಮಾನರು, ದೇವಸ್ಥಾನಗಳು, ತಜ್ಞರು, ಸಂಘಟಕರು ಎಲ್ಲರೂ ಸೇರಿ ಕಲಾವಿದರನ್ನು ಹತ್ತಿರ ತರಬೇಕು. ಎಷ್ಟೋ ಜನ ಕಲಾವಿದರಿಗೆ ವಿಮರ್ಶೆಯನ್ನು ಸ್ವೀಕರಿಸೋ ಮನೋಧರ್ಮ ಇಲ್ಲ. ಕೆಲವ್ರಿಗೆ ಇದೆ. ಯಕ್ಷಗಾನ ಕಲಾವಿದರ ಮತ್ತು ತಜ್ಞರ ಮಧ್ಯದ ಅಂತರ ಕಡಿಮೆ ಮಾಡಲು ಇದು ಮುಖ್ಯ ವೇದಿಕೆ. ನಾಡಿದ್ದಿನ ಸಮ್ಮೇಳನಕ್ಕೆ ಎಲ್ಲಾ ಕಲಾವಿದರಿಗೂ ಆಹ್ವಾನ ಇದೆ. ಅವರಿಗೆ ಪ್ರಯಾಣದ ವ್ಯವಸ್ಥೆಯನ್ನೂ ನಾವೇ ಮಾಡಿದ್ದೇವೆ ಯಾಕಂದ್ರೆ ಎಲ್ಲೋ ಪ್ರದರ್ಶನ ಇರುವಲ್ಲಿಂದ ಸಮ್ಮೇಳನಕ್ಕೆ ಬಂದು ಹೋಗಲು ಆರ್ಥಿಕವಾಗಿ ಅವರಿಗೆ ಹೊರೆ ಆಗ್ತದೆ. ಅದಕ್ಕಾಗಿ ಸಂಘಟನಾ ಸಮಿತಿಯವರೇ ಕಲಾವಿದರು ಬಂದು ಹೋಗಲು ವ್ಯವಸ್ಥೆ ಮಾಡಿದ್ದಾರೆ. ಮುಂದೆ ಇಂತಹಾ ಕಾರ್ಯಕ್ರಮಗಳಲ್ಲಿ ಕಲಾವಿದರು ಹೆಚ್ಚು ಭಾಗವಹಿಸುವಂತೆ ಆಗಬಹುದು.

***ಪ್ರಶ್ನೆ: ಕಲಾವಿದರ ಭಾಗವಹಿಸುವ ಆಸಕ್ತಿ ಹೇಗಿದೆ.***

**ಡಾ. ಜೋಶಿ:** ಕಲಾವಿದರು ಆಸಕ್ತಿ ತೋರಿದ್ದಾರೆ. ತಿರುಗಾಟದ ಮಧ್ಯದಲ್ಲಿ ಕಷ್ಟ ಆದರೂ ಬಂದು ಹೋಗುತ್ತೇವೆ ಎಂದು ಹೇಳಿದ್ದಾರೆ. ಕೆಲವು ಕಲಾವಿದರು ಹಿಂದೆಯೂ ಭಾಗಿ ಆಗಿದ್ದಾರೆ. ಈ ಸಲವೂ ಆಗ್ತಾರೆ.

***ಪ್ರಶ್ನೆ: ಯಕ್ಷಗಾನದಲ್ಲಿ ಕೆಲವೊಂದಕ್ಕೆ ಗೈಡ್ ಲೈನ್ಸ್/ಪ್ಯಾರಾಮೀಟರ್ಸ್ ಬೇಕು, ಅದು ಪ್ರದರ್ಶನ, ಕಥೆ, ಹಿಮ್ಮೇಳ ಮುಮ್ಮೇಳ ಎರಡೂ ತಿಟ್ಟುಗಳಲ್ಲಿ, ಎಂದು ಹೇಳಿದಿರಿ.***

***ಈ ಹಿನ್ನಲೆಯಲ್ಲಿ ಗೈಡ್ ಲೈನ್ಸ್ ತಯಾರಿಕೆಗೆ ಇದು ಪೂರ್ವ ವೇದಿಕೆ ಒದಗಿಸಿಕೊಡುತ್ತಾ?***

**ಡಾ. ಜೋಶಿ:** ಇದರ ಮುಖ್ಯ ಉದ್ದೇಶವೇ ಅದು. ಒಂದು ಅಭಿಮಾನವನ್ನು ನಿರ್ಮಿಸುವುದು, ಎಚ್ಚರವನ್ನು ನಿರ್ಮಿಸುವುದು ಮತ್ತು ಯಕ್ಷಗಾನದಲ್ಲಿ ಆಗಬೇಕಿರುವ ಕೆಲಸಗಳ ಬಗ್ಗೆ ಸಣ್ಣ ರೂಪದಲ್ಲಿ ಒಂದು ದಿಕ್ಸೂಚಿಯನ್ನು ನಿರ್ಮಾಣ ಮಾಡುವುದು.

***ಪ್ರಶ್ನೆ: ಕನ್ನಡ ಸಾಹಿತ್ಯ ಸಾಹಿತ್ಯ ಸಮ್ಮೇಳನದಲ್ಲಿ ಯಕ್ಷಗಾನ ಕವಿ/ಸಾಹಿತಿಗಳನ್ನು ಪರಿಗಣಿಸಬೇಕು ಎಂಬ ಹಿನ್ನಲೆಯಲ್ಲಿ ಈ ಸಮ್ಮೇಳನಕ್ಕೆ ಹೆಚ್ಚುವರಿ ತೂಕ ಬರಲಿದೆಯೇ? ಯಕ್ಷಕವಿಗಳ ಸಮಾವೇಶ ನಡೆಯಲಿದೆಯೇ?***

**ಡಾ. ಜೋಶಿ:** ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಯಕ್ಷಗಾನ ಕವಿಗಳನ್ನು ಸೇರಿಸುವುದು ಬೇಡಿಕೆಯಾಗಬಾರದು. ಅವರಿಗೆ ಬೇಕೆಂದರೆ ಪರಿಗಣಿಸಲಿ. ಕನ್ನಡ ಸಾಹಿತ್ಯದ ಅಧ್ಯಯನ ಪರಿಪೂರ್ಣವಾಗಬೇಕಾ? ಅದರಲ್ಲಿ ಪ್ರಸಂಗ ಸಾಹಿತ್ಯವನ್ನು ಅರ್ಥಗಾರಿಕೆಯನ್ನು ತೆಗೆದುಕೊಳ್ಳಲಿ. ಬೇಡಿಕೆ ಎಂಬ ಪದವನ್ನು ಯಕ್ಷಗಾನದವರು ಬಳಸಲೇ ಬಾರದು. ಕಳೆದ 50 ವರ್ಷಗಳಲ್ಲಿ 1972ನೇ ಇಸವಿಯಲ್ಲಿ ಕಾರ್ಕಳದಲ್ಲಿ ನಡೆದ ಸಾಹಿತ್ಯ ಸಮ್ಮೇಳನದಿಂದ ಹಿಡಿದು ಇವತ್ತಿನವರೆಗೂ ಜಿಲ್ಲಾ ಮಟ್ಟದ ಸಾಹಿತ್ಯ ಸಮ್ಮೇಳನದಲ್ಲಿ ಯಕ್ಷಗಾನವನ್ನು ಪರಿಗಣಿಸಿದ್ದಾರೆಯೇ. ಇದರ ಉಲ್ಲೇಖವನ್ನು ಆರ್ ನರಸಿಂಹಾಚಾರ್ ಕನ್ನಡ ಸಾಹಿತ್ಯ ಚರಿತ್ರೆ ಕವಿಚರಿತೆಯಲ್ಲಿ ಹೇಳಿದ್ದಾರೆ. ಬೆಂಗಳೂರು ವಿಶ್ವವಿದ್ಯಾನಿಲಯದ ಸಾಹಿತ್ಯ ಚರಿತ್ರೆಯಲ್ಲಿ ಯಕ್ಷಗಾನದ ಬಗ್ಗೆ ವಿಸ್ತಾರವಾದ ಮಾಹಿತಿ ಇದೆ. ಎನ್ ಎಸ್ ಲಕ್ಷ್ಮೀ ನಾರಾಭಟ್ ರವರ ಸಂಕ್ಷಿಪ್ತ ಸಾಹಿತ್ಯ ಚರಿತ್ರೆ ಕೃತಿಯಲ್ಲಿಯೂ ಇದೆ. ಇದೊಂದು ಜನಪ್ರಿಯವಾದ ಭಾವನೆ.




**ಶಿರಿಯಾರದಲ್ಲಿ ಮಂದಾರ್ತಿ ಮೇಳದ ಚೌಕಿಯಲ್ಲಿ ಯಕ್ಷಗಾನ ಸಮ್ಮೇಳನದ ಬ್ಯಾನರ್ ಅನಾವರಣ**

ಅವರು ನಮಗೆ ಚಾನ್ಸ್ ಕೊಟ್ಟು ಏನು ಆಗುವುದು ಬೇಡ. ಯಾವ ಸಾಹಿತಿಯೂ ಯಕ್ಷಗಾನಕ್ಕೆ ಚಾನ್ಸ್ ಕೊಡುವ ಧಾಟಿಯಲ್ಲಿ ಮಾತನಾಡಲೇಬಾರದು. ಕಾವ್ಯ, ಕಾದಂಬರಿ, ವಿಮರ್ಶೆ ಸಂಶೋಧನೆ, ಪ್ರಬಂಧ, ಕವಿತೆ ಇದ್ದ ಹಾಗೇ ಯಕ್ಷಗಾನ ಕೂಡಾ. ಯಕ್ಷಗಾನದಲ್ಲಿ ಭಾರತದ ಯಾವ ಭಾಷೆಯಲ್ಲೂ ಇಲ್ಲದಷ್ಟು ದೊಡ್ಡ ಗೀತ ಸಾಹಿತ್ಯ ಇದೆ. ಆರೇಳು ಲಕ್ಷ ಯಕ್ಷಗಾನದ ಪದ್ಯಗಳಿವೆ. 5 ಸಾವಿರದ ಹತ್ತಿರದಷ್ಟು ಪ್ರಸಂಗಗಳಿವೆ. ಯಾವ ಭಾಷೆಯಲ್ಲಿ ಇಷ್ಟು ದೊಡ್ಡ ಸಾಹಿತ್ಯ ಸಂಪತ್ತಿದೆ? ಸಾಹಿತ್ಯದ ಪರಿಪೂರ್ಣ ಅಧ್ಯಯನ ಆಗಬೇಕಾದ್ರೆ ಯಕ್ಷಗಾನ ಸಾಹಿತ್ಯವೂ ಬೇಕು. ಸಿನಿಮಾ ಸಾಹಿತ್ಯವೂ ಬೇಕು. ಸಿನಿಮಾದಲ್ಲಿ ಹೆಸರು ಪಡೆದ ಬೇರೆ ಕೃತಿಗಳನ್ನು ಬರೆದ ಡಾ. ದೊಡ್ಡರಂಗೇಗೌಡರನ್ನು ಸಾಹಿತಿಯನ್ನಾಗಿ ಮಾಡಿದ್ರು. ಸಮ್ಮೇಳನದ ಅಧ್ಯಕ್ಷ ಮಾಡಿದ್ರು. ಆಗಲೂ ಅವರು ಸಿನಿಮಾದವರು ಎಂದು ಮಾತುಗಳು ಬಂದವು. ಆದ್ರೆ ಸಿನಿಮಾ ಸಾಹಿತ್ಯ, ಸಾಹಿತ್ಯ ಅಲ್ವೇ? ಅತ್ಯುತ್ಕೃಷ್ಟ ಗೀತೆಗಳು ಸಂಭಾಷಣೆಗಳನ್ನು ಸಿನಿಮಾಗಾಗಿ ಬರೆದಿದ್ದಾರೆ. ಈ ವಿಷಯಗಳಲ್ಲಿ ನಮ್ಮ ಮೆಂಟಲ್ ಫ್ರೇಮ್ ಬದಲಾಗಬೇಕು. ಇದರಲ್ಲಿ ಕ್ಲೇಮ್ ಮಾಡುವ ಪ್ರಶ್ನೆಯೇ ಇಲ್ಲ. ಯಾರೇ ಒಪ್ಪಲಿ ಒಪ್ಪದಿರಲಿ ಅದರ ಬಗ್ಗೆ ನಾವು ತಲೆಕೆಡಿಸುವುದಲ್ಲ. ಯಕ್ಷಗಾನ ಸಾಹಿತ್ಯದ ಒಂದು ಪ್ರಕಾರ ಎಂದು ಪರಿಗಣಿಸಲ್ಪಡ್ತಾ ಇದೆ ಮತ್ತು ಬದಲಾವಣೆಗಳು ಆಗ್ತಾ ಬಂದಿದ್ದಾವೆ. ಎಲ್ಲ ವಿಭಾಗಗಳೂ ಹೀಗೆಯೇ ಒಂದೊಂದು ಕಾಲದಲ್ಲಿ ಸೇರ್ತಾ ಬಂದವುಗಳು. ಆದ್ದರಿಂದ ಇದೆಲ್ಲಾ ಸಹಜವೇ. ಇದೊಂದು ವಿವಾದದ ವಿಷಯ ಎಂದು ನಾನು ಭಾವಿಸುವುದಿಲ್ಲ.

***ಪ್ರಶ್ನೆ: ಸಮ್ಮೇಳನದ ಅಧ್ಯಕ್ಷರಾಗಿ ನಿಮ್ಮ ಆಶಯ ಏನು?***

**ಡಾ. ಜೋಶಿ:** ಯಕ್ಷಗಾನದ ವ್ಯವಸಾಯ ರಂಗಭೂಮಿಗೆ ಇರುವ ಬೇರೆ ಬೇರೆ ಸಮಸ್ಯೆಗಳು, ಕಲಾವಿದರ ಸಮಸ್ಯೆ, ಯಜಮಾನರ ಸಮಸ್ಯೆ ಇದನ್ನು ಯಕ್ಷಗಾನಕ್ಕೆ ಸಂಬಂಧಪಟ್ಟ ಎಲ್ಲರೂ ಆಲೋಚನೆ ಮಾಡಬೇಕು. ಇದು ನನ್ನ ಸಮಸ್ಯೆ ಅಲ್ಲ ಅವನ ಸಮಸ್ಯೆ, ಅದು ಅವ ನೋಡ್ಬೇಕು, ಇವ ನೋಡ್ಬೇಕು ಎಂದು ಜವಾಬ್ದಾರಿ ತಪ್ಪಿಸುವುದಲ್ಲ. ಇದರಲ್ಲಿ ಮುಖ್ಯ ಜವಾಬ್ದಾರಿ ವ್ಯವಸಾಯಿ ಕಲಾವಿದರದ್ದು. ಯಾಕೆಂದರೆ ಅದರಿಂದಲೇ ಅವನ ಜೀವನ. ಈಗ ನಾನು ಸಹಿತ ತಜ್ಞರೇನೋ ಹೇಳ್ತೇವೆ, ಹೋಗ್ತೇವೆ. ನಮಗೆ ನಮ್ಮ ವ್ಯವಸಾಯ ಬೇರೆ ಇದೆ. ಆದರೆ ತನಗೆ ಅನ್ನ ಕೊಡುವ ತನ್ನನ್ನು ಪೋಷಿಸುವ ಕಲೆಯ ಬಗ್ಗೆ ತಾನೇನಾದ್ರೂ ಮಾಡಬೇಕೆನ್ನುವ ತುಡಿತ ಕಲಾವಿದರಿಗೆ ಬೇಕು. ವಿಮರ್ಶಕರು, ಮೇಳದ ಯಜಮಾನರು ದೇವಸ್ಥಾನಗಳು, ಸರಕಾರ, ಕಲಾಪೋಷಕರು, ಯಕ್ಷಗಾನದ ಸುತ್ತ ಮುತ್ತ ಯಾರಿದ್ದಾರೋ, ವಲಯವನ್ನು ಪೋಷಿಸಿಕೊಂಡು ಹಾಗೂ ಅಭಿಮಾನಪಟ್ಟು ಅದರಿಂದ ಪ್ರಯೋಜನ ಪಡೆಯುವ ಅಥವ ಅದನ್ನು ಕಲೆಯಾಗಿ ಎಂಜಾಯ್ ಮಾಡುವವರು, ಅವರೆಲ್ಲರೂ ಇದರ ಬಗ್ಗೆ ಆಲೋಚನೆ ಮಾಡಬೇಕು. ಯಕ್ಷಗಾನ ಒಳ್ಳೆಯದಾಗಬೇಕು, ವಿಸ್ತರಣೆಯಾಗಬೇಕು. ರಾಷ್ಟ್ರೀಯ ಮಟ್ಟದಲ್ಲಿ ಯಕ್ಷಗಾನವನ್ನು ಕೊಡುವಾಗ ಇಲ್ಲಿ ಪ್ರೆಸೆಂಟ್ ಮಾಡುವುದಕ್ಕಿಂತ ಬೇರೆ ರೀತಿಯಲ್ಲಿ ಪ್ರೆಸೆಂಟ್ ಮಾಡಬೇಕು. ರಂಗಸ್ಥಳಕ್ಕೆ ಅಚ್ಚುಕಟ್ಟು ಸಿಸ್ಟಮ್ ಬೇಕು. ಹಿಮ್ಮೇಳದ ಮೂಮೆಂಟ್ ಕೂಡಾ ರಿಸ್ಟ್ರಿಕ್ಟ್ ಆಗಬೇಕು. ನಮ್ಮ ವ್ಯವಸಾಯಿ ಮೇಳಗಳಲ್ಲಿ ಹಿಮ್ಮೇಳಕ್ಕೆ ಇಂದಿಗೂ ಯುನಿಫಾರ್ಮ್ ಮಾಡಲು ನಾವು ತಯಾರಾಗಿಲ್ಲ. ಬಡಗು ತಿಟ್ಟಿನಲ್ಲಿ ತಕ್ಕ ಮಟ್ಟಿಗಾದರೂ ಮುಂಡಾಸಾದರೂ ಇದೆ. ದೇಶವಿದೇಶಗಳಲ್ಲಿ ರಂಗಭೂಮಿಯಲ್ಲಿ ಒಪ್ಪಿತವಾದ ಕೆಲವು ತತ್ವಗಳನ್ನು ನಾವು ಒಪ್ಪಕೊಳ್ಳಲೇಬೇಕು. ಧ್ವನಿ, ಬೆಳಕು, ರಂಗಸ್ಥಳದಲ್ಲಿ ಪ್ರೆಸೆಂಟ್ ಮಾಡುವ ರೀತಿ ಇದೆಲ್ಲ ತುಂಬ ಅಚ್ಚುಕಟ್ಟು, ಶಿಸ್ತಿಗೆ ಒಳಪಡಬೇಕು. ಆಧುನಿಕ ಭಾಷೆಯಲ್ಲಿ ಹೇಳುವುದಾದರೆ ಇಡೀ ಯಕ್ಷಗಾನಕ್ಕೆ ಅದನ್ನು ವಿತರಣೆ ಮಾಡಬೇಕಾದರೆ ಅದರ ಸ್ವರೂಪದಲ್ಲಿ, ವಿನ್ಯಾಸದಲ್ಲಿ ಮತ್ತು ವಿತರಣೆಯಲ್ಲಿ ಒಂದು ಸರಿಯಾದ ಪ್ಯಾಕೇಜಿಂಗ್ ಬೇಕು. ಆ ಪ್ಯಾಕೇಜಿಂಗ್ ಇಲ್ಲದೆ ಯಾರೋ ಒಬ್ಬ ಮಾತುಗಾರನಿಗಾಗಿ ಜನ ಬರುತ್ತಾರೆ, ಹೋಗುತ್ತಾರೆ. ರಂಗಸ್ಥಳದಲ್ಲಿ ಚಾ ಕುಡಿದ್ರೂ ದೊಡ್ಡ ವಿಷಯ ಅಲ್ಲ ಅದು. ಅದು ರಂಗಭೂಮಿಯ ಲಕ್ಷಣ ಅಲ್ಲ. ವ್ಯವಸಾಯಿ ಹಾಗೂ ಹವ್ಯಾಸಿಗಳೊಂದಿಗೆ ಸಂಪರ್ಕ ಏರ್ಪಡಬೇಕು. ವಿಮರ್ಶಕ ಮತ್ತು ಕಲಾವಿದರೊಡನೆ ಸಂಪರ್ಕ ಏರ್ಪಡಬೇಕು. ಯಜಮಾನರು ಕಲಾಭಿವೃದ್ಧಿಗೆ ಬೇಕಾಗಿ ಗಂಭೀರವಾಗಿ ಚಿಂತನೆ ಮಾಡಬೇಕು. ಕಾಲಮಿತಿಯ ಚಿಂತನೆ ಇದೆ ಈಗ. ಕಾಲಮಿತಿ ಬೇಡ ಎಂದು ಹೇಳುವವರಿದ್ದಾರೆ. ಮಿತ ಕಾಲದೊಳಗೆ ಒಂದು ಉತ್ತಮ ಪ್ರದರ್ಶನವನ್ನು ಹೇಗೆ ನೀಡಬೇಕು ಎಂಬುದರ ಬಗ್ಗೆ ನಾವು ಚಿಂತಿಸಬೇಕು. ಇಂತಹ ವಿಷಯಗಳು ಒಂದೇ ಸಲ ಸಮ್ಮೇಳನದಲ್ಲಿ ತೀರ್ಮಾನ ಆಗುವುದಿಲ್ಲ. ಅದು ಒಂದೊಂದಾಗಿ ತೀರ್ಮಾನ ಆಗುವಂಥದ್ದು. ಆ ಹಿನ್ನಲೆಯಲ್ಲಿ ಇದೊಂದು ಆರಂಭ.

**ಗಮನಿಸಿ– ನಮ್ಮ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳ ಅನಿಸಿಕೆ ಅಭಿಪ್ರಾಯಗಳು ಲೇಖಕರದ್ದೇ ಹೊರತು, ಸಂಪಾದಕ ಮಂಡಳಿಯದ್ದಲ್ಲ. ನಿಮ್ಮ ಪ್ರತಿಕ್ರಿಯೆಯನ್ನು ಕಳುಹಿಸಬೇಕಾದ ಇ–ಮೇಲ್ – nadanoopuravandaru@gmail.com ಮೊಬೈಲ್ ಸಂಖ್ಯೆ– 9482847978. ನಮ್ಮ ವೆಬ್ ಸೈಟ್ ವಿಳಾಸ– https://nyt.1ngo.in/ – ಸಂಪಾದಕರು**

# ಯಕ್ಷಗಾನ ಕಾರ್ಯಕ್ರಮಗಳಿಗೆ ಪ್ರಾಯೋಜಕತ್ವ

**ಯಾ**ವುದೇ ಕಲೆಗಳನ್ನು ಪ್ರಸ್ತುತ ಪಡಿಸಬೇಕಾದರೆ ಪ್ರಾಯೋಜಕರ ಪಾತ್ರ ನಿರ್ಣಾಯಕ. ಹಿಂದಿನ ಕಾಲದಲ್ಲಿ ಕಲೆಗಳಿಗೆ ಪೋಷಕರಾಗಿ ರಾಜ ಮಹಾರಾಜರಿದ್ದರು, ಕಲೆಗೆ ರಾಜಾಶ್ರಯವಿತ್ತು. ಆದರೆ, ಈಗಿನ ಬದಲಾದ ಕಾಲಘಟ್ಟದಲ್ಲಿ, ಸರಕಾರವೇ ರಾಜನ ಸ್ಥಾನದಲ್ಲಿರುವುದು. ಈಗಿನ ಪರಿಸ್ಥಿತಿಯಲ್ಲಿ ವಿಶಾಲವಾದ ಜನಸಂಖ್ಯೆಯನ್ನು ಹೊಂದಿರುವ ರಾಜ್ಯದಲ್ಲಿ ಸರಕಾರವು ಎಲ್ಲಾ ಕಲೆಗಳನ್ನು ಪೋಷಿಸುವ ಬದ್ಧತೆಯನ್ನು ಸಮರ್ಥವಾಗಿ ನಿರ್ವಹಿಸುವುದು ಕಷ್ಟಸಾಧ್ಯ. ಈ ನಿಟ್ಟಿನಲ್ಲಿ ಸರ್ಕಾರದೊಂದಿಗೆ, ಸರಕಾರದ ಒಂದು ಅಂಗ ಎನಿಸಿದ ಖಾಸಗಿ ಸಂಸ್ಥೆಗಳು ಕಾರ್ಯ ನಿರ್ವಹಿಸಬೇಕಾದುದು, ಕಲಾ ಮಾಧ್ಯಮದ ಬೆಳವಣಿಗೆಗೆ ಅನಿವಾರ್ಯವೂ ಹೌದು. ಒಂದು ಸಮಾಧಾನಕರ ವಿಷಯವೆಂದರೆ, ಕರಾವಳಿಯ ಮಣ್ಣಿನ ಕಲೆ ಎನಿಸಿದ ಯಕ್ಷಗಾನಕ್ಕೆ, ಹಲವಾರು ಸಂಘ ಸಂಸ್ಥೆಗಳು ಪ್ರೋತ್ಸಾಹ, ಪ್ರಾಯೋಜಕತ್ವ ನೀಡುತ್ತಿರುವುದು.




ದಕ್ಷಿಣೋತ್ತರ ಕರಾವಳಿ ಜಿಲ್ಲೆಯಲ್ಲಿ, ಯಕ್ಷಗಾನ ಎಂಬ ಕಲೆಯು ಸುಪ್ರಸಿದ್ಧ. ಹಲವಾರು ಸಂಘ ಸಂಸ್ಥೆಗಳು ಯಕ್ಷಗಾನ ಕಲೆಯ ಪ್ರದರ್ಶನಕ್ಕೆ ಪೂರಕವಾಗಿ ಪ್ರಾಯೋಜಕತ್ವ ನೀಡಿ ತನ್ನ ದೇಣಿಗೆ ಸಲ್ಲಿಸುತ್ತಿದೆ. ಈ ಕಲೆಯ ಬೆಳವಣಿಗೆಗೆ ಕಲಾ ಪೋಷಕರ ಬೆಂಬಲ ಸದಾ ಕಾಲ ಒದಗಿ ಬಂದಿದೆ. ಸರಕಾರದ ನಿಯಮಾವಳಿಯ ಪ್ರಕಾರ, ಎಲ್ಲಾ ಜಾನಪದ ಕಲೆಗಳನ್ನೂ ಪೋಷಿಸಬೇಕಾದ, ಪ್ರೋತ್ಸಾಹ ನೀಡಬೇಕಾದ ಅನಿವಾರ್ಯತೆ ಇರುವಾಗ, ಯಕ್ಷಗಾನಕ್ಕೆ ಮಾತ್ರ ಸಂಪೂರ್ಣ ಬೆಂಬಲ, ಪ್ರೋತ್ಸಾಹ ನೀಡುವುದನ್ನು ನಿರೀಕ್ಷಿಸಲಾಗದು. ಸರಕಾರೀ ವಲಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಯಕ್ಷಗಾನ ಅಕಾಡೆಮಿ, ತುಳು ಅಕಾಡೆಮಿ ಯಕ್ಷಗಾನಕ್ಕೆ ಪ್ರೋತ್ಸಾಹ ನೀಡುತ್ತಿರುವುದು ಸಮಾಧಾನಕರ ವಿಷಯ. ಆದರೆ, ಈ ಸರಕಾರಿ ಅಂಗಸಂಸ್ಥೆಗಳ ಪ್ರಾಯೋಜಕತ್ವ ಪಡೆಯಲು ಹಲವಾರು ನಿಯಮಾವಳಿಗಳ ತೊಡಕಿದೆ. ಈ ನಿಯಮಗಳನ್ನು ಪಾಲಿಸಿ, ಸಹಾಯಧನ ಪಡೆಯುವುದು ಕಷ್ಟದ ಕೆಲಸ. ಇಷ್ಟೆಲ್ಲಾ ಕಷ್ಟ ಪಟ್ಟು ಪ್ರಾಯೋಜಕತ್ವ ಪಡೆದರೂ, ಸಹಾಯಧನ ಕೈಗೆ ಬರಲು ತಿಂಗಳುಗಟ್ಟಲೆ ಕಾಯಬೇಕು. ಈ ಕಾರಣದಿಂದಾಗಿ, ಹೆಚ್ಚಿನ ಯಕ್ಷಗಾನ ಸಂಘಟನೆಗಳು ಸರಕಾರೀ ಪ್ರಾಯೋಜಕತ್ವದ ಬೆನ್ನು ಬೀಳದೇ, ಖಾಸಗೀ ಪ್ರಾಯೋಜಕರ, ಬ್ಯಾಂಕ್ ಹಾಗೂ ಇನ್ನಿತರ ಸಂಸ್ಥೆಗಳನ್ನು ಪ್ರಾಯೋಜಕತ್ವಕ್ಕಾಗಿ ಸಂಪರ್ಕಿಸುವುದು.

ದಕ್ಷಿಣೋತ್ತರ ಕನ್ನಡ ಜಿಲ್ಲೆಯಲ್ಲಿ ಹಲವಾರು ಖಾಸಗಿ ಸಂಸ್ಥೆಗಳು ಯಕ್ಷಗಾನಕ್ಕೆ ಪ್ರಾಯೋಜಕತ್ವ ನೀಡಿ ಪ್ರೋತ್ಸಾಹಿಸುತ್ತಿದೆ. ಖಾಸಗಿ ಬ್ಯಾಂಕಿಂಗ್ ವಲಯದ ಮಂಗಳೂರಿನ ಕರ್ಣಾಟಕ ಬ್ಯಾಂಕ್ ಲಿಮಿಟೆಡ್, ಪ್ರಸ್ತುತ ಯಕ್ಷಗಾನಕ್ಕೆ ಪ್ರಾಯೋಜಕತ್ವ, ಪ್ರೋತ್ಸಾಹ ನೀಡುವಲ್ಲಿ ಮುಂಚೂಣಿಯಲ್ಲಿದೆ. ಹೆಚ್ಚಿನ ಕಡೆಗಳಲ್ಲಿ, ಯಕ್ಷಗಾನಕ್ಕೆ ಕರ್ಣಾಟಕ ಬ್ಯಾಂಕ್ ನ ಪ್ರಾಯೋಜಕತ್ವದ ಬ್ಯಾನರ್ ನೋಡಬಹುದು. ಯಕ್ಷಗಾನ ಪ್ರದರ್ಶನವಾದ ಒಂದು ವಾರದೊಳಗೆ, ಕಲಾ ಸಂಸ್ಥೆಗಳಿಗೆ ಪ್ರಾಯೋಜಕತ್ವದ ಮೊಬಲಗನ್ನು ನೀಡಿ, ಕರ್ಣಾಟಕ ಬ್ಯಾಂಕ್ ಪ್ರೋತ್ಸಾಹ ನೀಡುತ್ತಿರುವುದು ಗಮನಾರ್ಹ. ದಕ್ಷಿಣೋತ್ತರ ಕನ್ನಡ ಜಿಲ್ಲೆಯಲ್ಲಿ ಅದೆಷ್ಟೋ ಬ್ಯಾಕ್ ಗಳಿದ್ದರೂ, ಕೆಲವೊಂದು ಬ್ಯಾಂಕ್ ಗಳು ಸ್ಥಾಪನೆಯಾದದ್ದು ನಮ್ಮ ಜಿಲ್ಲೆಯಲ್ಲೇ ಆದರೂ ಆ ಬ್ಯಾಂಕ್ ಗಳು ಯಕ್ಷಗಾನಕ್ಕೆ, ಕರ್ಣಾಟಕ ಬ್ಯಾಂಕ್ ನಷ್ಟು ಪ್ರೋತ್ಸಾಹ ನೀಡುವುದಿಲ್ಲ ಎಂಬುದನ್ನು ಗಮನಿಸಬೇಕು. ತಲ್ಲೂರು ಫ್ಯಾಮಿಲಿ ಟ್ರಸ್ಟ್, ಕಂದಾವರ ರಘುರಾಮ ಶೆಟ್ಟಿ ಟ್ರಸ್ಟ್ ಮುಂತಾದ ಖಾಸಗಿ ಸಂಸ್ಥೆಗಳು ಯಕ್ಷಗಾನಕ್ಕೆ ಪ್ರೋತ್ಸಾಹ, ಪ್ರಾಯೋಜಕತ್ವ ನೀಡುತ್ತಿವೆ. ಇನ್ನೂ ಹಲವಾರು ಸಂಘ ಸಂಸ್ಥೆಗಳು ಯಕ್ಷಗಾನಕ್ಕೆ ಪ್ರಾಯೋಜಕತ್ವ ನೀಡುತ್ತಿವೆಯಾದರೂ, ಅದು ಆಯಾಯ ಊರುಗಳ ಮಟ್ಟದಲ್ಲಿ. ಮೂಡುಬಿದಿರೆಯಲ್ಲಿ ಯಕ್ಷಸಂಗಮ, ಅಗರಿ ಎಂಟರ್ ಪ್ರೈಸಸ್, ಆಳ್ವಾಸ್ ಫೌಂಡೇಶನ್, ದನಲಕ್ಷ್ಮಿ ಗ್ರೂಪ್, ಎಂ.ಸಿ.ಎಸ್. ಬ್ಯಾಂಕ್ ಮುಂತಾದ ಸಂಸ್ಥೆಗಳು ಮೂಡುಬಿದಿರೆಯ ಯಕ್ಷಗಾನ ಕಾರ್ಯಕ್ರಮಗಳಿಗೆ ಪ್ರಾಯೋಜಕತ್ವ ನೀಡುತ್ತಿವೆ. ಈಶ್ವರ ಭಟ್ ಮತ್ತು ಮಕ್ಕಳು, ದಿವಾಕರ ಶೆಟ್ಟಿ, ಪ್ರೇಮನಾಥ ಮಾರ್ಲ, ನೆಲ್ಲಿಮಾರು ಸದಾಶಿವ ರಾವ್, ಗಿರಿಧರ್ ನಾಯಕ್, ಅಭಯಚಂದ್ರ ಜೈನ್, ಈ ಲೇಖನದ ಲೇಖಕ ಮುಂತಾದವರು ವೈಯಕ್ತಿಕ ಮಟ್ಟದಲ್ಲಿ ಮೂಡುಬಿದಿರೆಯ ಯಕ್ಷಗಾನ ಕಾರ್ಯಕ್ರಮಗಳಿಗೆ ಪ್ರಾಯೋಜಕತ್ವ ನೀಡುತ್ತಿದ್ದಾರೆ. ಹೀಗೆಯೇ ಉಳಿದ ಊರುಗಳಲ್ಲೂ, ಪ್ರಾದೇಶಿಕ ಮಟ್ಟದ ಪ್ರಾಯೋಜಕರು ಇದ್ದಾರೆ. ಕುಂದಾಪುರ ವಲಯದಲ್ಲಿ ಮಾರಣಕಟ್ಟೆ ಮಂಜ, ಮಂಗಳೂರು ವಲಯದಲ್ಲಿ ಹರಿಕೃಷ್ಣ ಪುನರೂರು, ಪ್ರದೀಪ್ ಕುಮಾರ್ ಕಲ್ಕೂರರಂರಹ ಪ್ರಾಯೋಜಕರೂ ಇದ್ದಾರೆ.





ಕರ್ನಾಟಕ ಸರಕಾರವು ಯಕ್ಷಗಾನ ಕಲೆಗೆ ನೀಡುವ ಪ್ರಾಯೋಜಕತ್ವ ಸಹಾಯಧನವನ್ನು ಮಂಜೂರು ಮಾಡುವ ನಿಯಮಾವಳಿಗಳನ್ನು ಸರಳಗೊಳಿಸಬೇಕು. ಸಹಾಯಧನವನ್ನು ಕ್ಷಿಪ್ರವಾಗಿ ಬಿಡುಗಡೆಗೊಳಿಸಬೇಕು. ಹಾಗಾದಲ್ಲಿ ಯಕ್ಷಗಾನಕ್ಕೆ ಸರಕಾರದ ದೊಡ್ಡ ಕೊಡುಗೆಯಾದೀತು. ಇಲ್ಲದಿದ್ದಲ್ಲಿ ಸರಕಾರದ ಪ್ರಾಯೋಜಕತ್ವ ಎಂಬುದು "ಊಟಕ್ಕಿಲ್ಲದ ಉಪ್ಪಿನಕಾಯಿ" ಆದೀತು. ಸದ್ಯಕ್ಕಂತೂ ದಕ್ಷಿಣೋತ್ತರ ಕನ್ನಡ ಜಿಲ್ಲೆಯಲ್ಲಿ, ಖಾಸಗೀ ಬ್ಯಾಂಕ್, ಸಂಘಸಂಸ್ಥೆಗಳು ಹಾಗೂ ವೈಯುಕ್ತಿಕ ದಾನಿಗಳೇ ಯಕ್ಷಗಾನ ಕಲೆಗೆ ಮುಖ್ಯ ಪ್ರಾಯೋಜಕರು ಹಾಗೂ ಪ್ರೋತ್ಸಾಹಕರು.



**ಎಂ.ಶಾಂತರಾಮ ಕುಡ್ವ**

# ನಡುತಿಟ್ಟಿನ ಆಶಾಕಿರಣ –ಅಪೂರ್ವ ಪುರುಷ ವೇಷಧಾರಿ – ಕೋಟ ಸುರೇಶ ಬಂಗೇರ


**ಬ**ಡಗುತಿಟ್ಟಿನ ಒಂದು ಪ್ರಬೇಧವಾದ ಕುಂದಾಪುರ–ಬ್ರಹ್ಮಾವರ ಪರಿಸರದ ನಡುತಿಟ್ಟಿನ ಪ್ರಾತಿನಿಧಿಕ ಪುರುಷ ವೇಷಧಾರಿಯಾಗಿ, ಮುಂದಿನ ಪೀಳಿಗೆಗೆ ಆಶಾಕಿರಣವಾಗಿರುವ **ಕೋಟ ಸುರೇಶ ಬಂಗೇರ** ಅವರು ಈ ತಲೆಮಾರಿನ ನಡುತಿಟ್ಟಿನ ಪ್ರಾತಿನಿಧಿಕ ಕಲಾವಿದರು, ಹಿರಿಯರಾದ ಮೊಳಹಳ್ಳಿ ಹೆರಿಯ ನಾಯ್ಕ್ ಮತ್ತು ಶಿರಿಯಾರ ಮಂಜುನಾಯ್ಕರ ಉತ್ತರಾಧಿಕಾರಿಯಾಗಿ ಅವರನ್ನು ಗುರುತಿಸಬಹುದು.



ಶಿರಿಯಾರ ಮಂಜು ನಾಯ್ಕರ ಲಾಲಿತ್ಯಪೂರ್ಣ ಶ್ರುತಿಬದ್ದ ಮಾತುಗಾರಿಕೆ. ವೀರಭದ್ರ ನಾಯ್ಕರ ಹೆಜ್ಜೆಗಾರಿಕೆ ಮೊಳಹಳ್ಳಿ ಹೆರಿಯ ನಾಯ್ಕರ ರಂಗತಂತ್ರ ಮತ್ತು ಕಿರು ಹೆಜ್ಜೆ, ಇವರು ಮೂವರನ್ನು ಒಮ್ಮೆಗೆ ನೋಡಬೇಕಾದರೆ ಸುರೇಶ ಬಂಗೇರರ ವೇಷಗಾರಿಕೆಯ ಸೊಗಸನ್ನು ನೋಡಬೇಕು. ಕನಕಾಂಗಿ ಕಲ್ಯಾಣ, ಜಾಂಬವತಿ ಕಲ್ಯಾಣ, ಕೃಷ್ಣಾರ್ಜುನ–ಸುಭದ್ರ ಕಲ್ಯಾಣ ಸಹಿತ ಯಾವುದೇ ಪ್ರಸಂಗದ ಕೃಷ್ಣನಿರಲಿ ಅಲ್ಲಿ ಮಂಜುನಾಯ್ಕರ ನಿರಾತಂಕ ನಿರರ್ಗಳವಾದ ಶ್ರುತಿಬದ್ದ ಮಾತುಗಾರಿಕೆ, ಕರ್ಣಾರ್ಜುನದ ಅರ್ಜುನ, ವೀರಮಣಿ ಕಾಳಗದ ಪುಷ್ಕಳ, ತಾಮ್ರಧ್ವಜ ಮುಂತಾದ ವೇಷಗಳಲ್ಲಿ ಹೆರಿಯ ನಾಯ್ಕರ ರಂಗನಿರ್ವಹಣೆ, ಹೆಜ್ಜೆಗಾರಿಕೆ, ಅತಿಕಾಯನಂತಹ ಪಾತ್ರಗಳಲ್ಲಿ ವೀರಭದ್ರನಾಯ್ಕರ ಮಟ್ಪಾಡಿ ಶೈಲಿಯನ್ನು ಗುರುತಿಸಬಹುದಾದ ಬಡಗುತಿಟ್ಟಿನ ಅಪರೂಪದ ಕಲಾವಿದರಲ್ಲಿ ಇವರೂ ಒಬ್ಬರು. ನಡುತಿಟ್ಟಿನಲ್ಲಿ ಇಂದು ಬಹು ಪ್ರಸಿದ್ದಿಯ ಸಮರ್ಥ ಸುದನ್ವ ಪಾತ್ರದಾರಿ ಇವರೊಬ್ಬರೇ ಎಂದು ಯಾವ ಮಾನದಂಡದಿಂದಲೂ ಹೇಳಬಹುದು. ಉತ್ತರಕನ್ನಡದ ಭಾವಾಭಿನಯಕ್ಕೆ ದಕ್ಷಿಣ ಕನ್ನಡದ ವೀರಾಭಿನಯ ಸೇರಿಸಿ ಅವರು ಚಿತ್ರಿಸಿದ ಸುಧನ್ವ ಯುವಕಲಾವಿದರಿಗೆ ಮಾರ್ಗದರ್ಶಿ, ಶೃಂಗಾರ, ವೀರ, ಭಕ್ತಿ ರಸಗಳಿಂದ ಚಿತ್ರಿಸಲ್ಪಡುವ ಸುಧನ್ವನ ವೇಷವನ್ನು ಚಿತ್ರಿಸುವುದು ಪುರುಷ ವೇಷಧಾರಿಗಳಿಗೆ ಒಂದು ಸವಾಲು. ಭೀಷ್ಮ ಪ್ರತಿಜ್ಞೆಯ ದೇವವ್ರತನಾಗಿ" ಪರಿಕಿಸು ಮಂತ್ರಿಯೇ ನೀನು" ಮತ್ತು **"ಮಲಗಿರುವ ಪಿತನನ್ನು ಎಬ್ಬಿಸುತ ಗಾಂಗೇಯ"** ಇರಲಿ, ರುಕ್ಮಾಂಗದ ಚರಿತ್ರೆಯ ಧರ್ಮಾಂಗದನಾಗಿ **"ಮನದೊಳಾಲೋಚಿಸುತಲಾಗ ಧರ್ಮಾಂಗದನು"** ಹಾಗೂ ರುಕ್ಮಾವತಿ ಕಲ್ಯಾಣದ **"ವನಚರರ ನುಡಿ ಕೇಳಿ ಹರಿಯು ತನ್ನಯ ಮನದಿ"** ಈ ಮೂರು ಸನ್ನಿವೇಷ ಸಾಕು ಸುರೇಶನವರ ಪಾತ್ರದ ಸಿದ್ಧಿಯನ್ನು ಗಮನಿಸಲು.

ಸುರೇಶರ ವೇಷಗಳಲ್ಲಿ ಗುರುತಿಸಬೇಕಾದದ್ದು ಮಾತುಗಾರಿಕೆಯ ಮೋಡಿ ಮತ್ತು ವೇಷಗಾರಿಕೆಯ ಸೊಗಸು. ಎಲ್ಲಿಯೂ ಯಕ್ಷಗಾನದ ಆವರಣ ಭಂಗ ಮಾಡದೆ ಪಾತ್ರಗಳ ಔಚಿತ್ಯ ಕೆಡಿಸದೆ, ಎದುರು ಪಾತ್ರಧಾರಿಗಳಿಗೆ ಅನಗತ್ಯ ಸವಾಲು ಹಾಕದೇ ಹಿರಿಯರು ಹಾಕಿಕೊಟ್ಟ ಚೌಕಟ್ಟಿನೊಳಗೆ ಕಡೆದು ನಿಲ್ಲಿಸಿದ ಬಿಂಬದ ಹಾಗೆ ಅವರ ಪಾತ್ರ ಚಿತ್ರಣ. ಅಪೂರ್ವವಾದ ಶ್ರುತಿಬದ್ಧತೆ ಅವರ ಆಸ್ತಿ. ಬಹುದೂರ ಕೇಳಿಸಬಹುದಾದ ಶ್ರುತಿಬದ್ಧ ಕಂಠದಿಂದ ಹೊರಡುವ ಅವರ ಸುಧನ್ವ ದೇವವ್ರತ, ಚಂದ್ರಹಾಸ ಮುಂತಾದ ಪಾತ್ರಗಳ ವ್ಯಾಕರಣಬದ್ಧ ಪೀಠಿಕೆಯ ಅರ್ಥ ಎಂತಹ ವಿದ್ಯಾವಂತರನ್ನು ನಾಚಿಸುವಂತಹದ್ದು. ಚಂದ್ರಹಾಸ ಚರಿತ್ರೆಯ **"ಅಹಾಹ ಏನ್ ಸೊಬಗು ಕಾಣುವುದಿಲ್ಲಿ ನೇತ್ರ ಸಹ ಹರುಷವ ಕಾಂಬ ತೆರನಿಲ್ಲಿ"** ಇದೊಂದೆ ಪದ್ಯದ ಸ್ವಗತದ ಮಾತು ಸಾಕು ಇವರ ಅರ್ಥಗಾರಿಕೆಯ ಸೊಗಸನ್ನು ತಿಳಿಯಲು. ಇಂದಿಗೂ ದಕ್ಷಿಣ ಕನ್ನಡ ದೂರದ ಬೆಂಗಳೂರು ಮುಂಬೈಗಳಲ್ಲಿ ಬಡಗುತಿಟ್ಟಿನ ಸಾಂಪ್ರದಾಯಿಕ ಶೈಲೀಕೃತ ಭವ್ಯತೆಯನ್ನು ಪಾತ್ರಗಳ ಮೂಲಕ ಜೀವಂತವಾಗಿ ತೆರೆದಿಡುವ ಮಧ್ಯಮ ತಿಟ್ಟಿನ ಕರ್ಣಾರ್ಜುನ ಪ್ರಸಂಗದ ಪ್ರದರ್ಶನವಿದ್ದಲ್ಲಿ ಅರ್ಜುನ ಅಥವಾ ಕೃಷ್ಣನ ಪಾತ್ರಕ್ಕೆ ಇವರು ಅನಿವಾರ್ಯವಾಗುತ್ತಾರೆ. ಬಡಗುತಿಟ್ಟಿನ ಪುರುಷ ವೇಷಗಳ ಸಾಂಪ್ರದಾಯಕ ಸೊಗಸು ಮೈದುಂಬಿಕೊಂಡ ಸುರೇಶರ ಪರಿಶುದ್ಧ ನೃತ್ಯಾಭಿನಯ, ಆಕರ್ಷಕ ಆಳಂಗ, ನಿರರ್ಗಳ ಮಾತುಗಾರಿಕೆ, ಸೊಗಸಾದ ವೇಷಗಾರಿಕೆಯಿಂದ ಇತರರಿಗಿಂತ ಭಿನ್ನವಾಗಿ ಗುರುತಿಸಬಹುದಾಗಿದೆ. ಮೊಳಹಳ್ಳಿ ಹಿರಿಯ ನಾಯ್ಕರು ಅವರ ಸಂದರ್ಶನದಲ್ಲಿ ಮುಂದಿನ ತಲೆಮಾರಿನ ಕಲಾವಿದರಾಗಿ ಇವರನ್ನು ಹೆಸರಿಸಿದ್ದು ಇವರ ಹಿರಿಮೆಗೆ ಸಾಕ್ಷಿ.

**ಉಡುಪಿ ತಾಲೂಕು ಮಣೂರು–ಪಡುಕೆರೆ** ಎಂಬಲ್ಲಿ 1965ರಲ್ಲಿ **ಬೇಡು ಮರಕಾಲ ಮತ್ತು ಅಕ್ಕಮ್ಮ** ದಂಪತಿಯ ಮಗನಾಗಿ ಜನಿಸಿದ **ಸುರೇಶ ಬಂಗೇರರು** ಹದಿನಾರನೇ ವಯಸ್ಸಿನಲ್ಲಿ ಮಂದಾರ್ತಿ ಮೇಳದಲ್ಲಿ ಗೆಜ್ಜೆ ಕಟ್ಟಿದರು. ನಿರಂತರ 36 ವರ್ಷ ಕಲಾಸೇವೆ ಮಾಡಿದ ಇವರು ಬಹುತೇಕ ಹಿರಿಯ ಕಲಾವಿದರಂತೆ ಯಾವ ಅಧಿಕೃತ ಗುರುವೂ ಇಲ್ಲದೆ, ಏಕಲವ್ಯನಂತೆ ಕಂಡುಕೇಳಿ ಉನ್ನತ ಮಟ್ಟಕ್ಕೆ ಏರಿದವರು. ಅಂದಿನ ಹಿರಿಯ ಕಲಾವಿದ ಶಿರಿಯಾರ ಮಂಜು ನಾಯ್ಕರ ಹೂವಿನ ಕೋಲಿನ ಬಾಲ ಕಲಾವಿದರಾಗಿ ಶಿರಿಯಾರದವರ ನಿಕಟ ಸಂಪರ್ಕವನ್ನು ಸಾಧಿಸಿ ಪ್ರೌಢ ಅರ್ಥಗಾರಿಕೆ, ರಂಗನಡೆ. ನೃತ್ಯಾಭಿನಯ ಕೌಶಲವನ್ನು ಕಂಡುಕೊಂಡು ತನ್ನ ಕಲಾನುಭವವನ್ನು ಗರಿಷ್ಟ ಮಟ್ಟದಲ್ಲಿ ಇಟ್ಟುಕೊಂಡವರು. ಸಹೋದರ ಸಂಬಂಧಿ ಮೊಳಹಳ್ಳಿ ಹೆರಿಯನಾಯ್ಕರನ್ನು ಗುರು ಸ್ಥಾನದಲ್ಲಿರಿಸಿಕೊಂಡು ಅವರೊಂದಿಗೆ ಮಂದಾರ್ತಿ ಮೇಳದಲ್ಲಿ ಗೆಜ್ಜೆ ಕಟ್ಟಿ ನಂತರ ದೀರ್ಘಕಾಲ 17 ವರ್ಷ ಸೌಕೂರು, ಸಾಲಿಗ್ರಾಮ, ಪೆರ್ಡೂರು ಕಮಲಶಿಲೆ ಮೇಳದಲ್ಲಿ ಸೇವೆ ಸಲ್ಲಿಸಿ ಸದ್ಯ ಅಮೃತೇಶ್ವರಿ ಮೇಳದ ಪುರುಷ ವೇಷಧಾರಿ ಜೊತೆಗೆ ಮೇಳದ ಪ್ರಬಂಧಕರಾಗಿ ಸೇವೆ ಸಲ್ಲಿಸುತಿದ್ದಾರೆ. ಹೊಸ ಪ್ರಸಂಗಕ್ಕೂ ನ್ಯಾಯ ಒದಗಿಸಿದ ಅವರಿಗೆ ಬಹು ಪ್ರಸಿದ್ಧಿ ತಂದ ಪಾತ್ರ ದಿ.ಕಾಳಿಂಗ ನಾವಡರ ಕಾಲದಲ್ಲಿ ನಾಗಶ್ರೀ ಪ್ರಸಂಗದಲ್ಲಿ ಶಿರಿಯಾರ ಮಂಜು ನಾಯ್ಕರು ಮಾಡುತಿದ್ದ ಶುಭ್ರಾಂಗನ ಪಾತ್ರ. ಬಯಲಾಟ ಮೇಳದಲ್ಲಿ ಈ ಪಾತ್ರವನ್ನು ಇವರ ರೀತಿ ಚಿತ್ರಿಸಿದ ಇನ್ನೊಬ್ಬ ಕಲಾವಿದ ಇಲ್ಲವೆನ್ನಬಹುದಾಗಿದೆ. ಅಭಿನವ ಶಿರಿಯಾರ ಮಂಜುನಾಯ್ಕ್ ಎಂದು ಜನ ಇವರನ್ನು ಗುರುತಿಸುತ್ತಾರೆ. ಸತಿ ಸೀಮಂತಿನಿಯ ಚಂದ್ರಾಂಗದ, ಚೆಲುವೆ ಚಿತ್ರಾವತಿಯ ಹೇಮಾಂಗದ, ಭಾನು ತೇಜಸ್ವಿ ಮುಂತಾದ ಪಾತ್ರಗಳು ಅಷ್ಟೇ ಪ್ರಸಿದ್ಧ. ಕೇವಲ ಸೌಮ್ಯ, ಸಾತ್ವಿಕ ಪಾತ್ರಗಳಿಗೆ ಮಾತ್ರ ಒಗ್ಗುವ ಅವರ ಆಳಂಗ ಮತ್ತು ಸ್ವರ ಖಳನಾಯಕನ ಪಾತ್ರಗಳಿಗೆ ಒಗ್ಗದಿದ್ದರಿಂದ ಸಾತ್ವಿಕ ಪಾತ್ರವಾದ ದೇವಿ ಮಹಾತ್ಮೆಯ ವಿಷ್ಣು, ರಕ್ತಬೀಜ, ಸುಧನ್ವ, ಕೃಷ್ಣ ಮುಂತಾದ ಪಾತ್ರಗಳನ್ನು ಮಾತ್ರ ಜನ ಅವರಿಂದ ಬಯಸಿದ್ದರಿಂದ



**ಪ್ರೊ.ಎಸ್.ವಿ.ಉದಯ ಕುಮಾರ ಶೆಟ್ಟಿ**

ಕೀಚಕ, ರಾವಣ ಮುಂತಾದ ಖಳ ಪಾತ್ರಗಳಲ್ಲಿ ಅವರು ಅಭಿನಯಿಸಿದ್ದು ಕಡಿಮೆ. ಹಾಗೇಯೇ ಕಿರೀಟ ವೇಷಕ್ಕಿಂತ ಕೇದಗೆ ಮುಂದಲೆ ವೇಷಗಳೆ ಅವರಲ್ಲಿ ಹೆಚ್ಚು ಆಕರ್ಷಣೆಯಾಗಿ ಕಾಣುವುದರಿಂದ ಅವರ ವತ್ಸಾಕ್ಯ, ಚಂದ್ರಹಾಸನಂತ ಪಾತ್ರಗಳು ಹೆಚ್ಚು ಜನಪ್ರಿಯವಾಗಿವೆ. ಬಡಗುತಿಟ್ಟಿನ ಪ್ರಕ್ರತಿ-ಪುರುಷರ ಸಮ್ಮಿಲನದಂತೆ ಕಾಣುವ ನೆರಿಯುಟ್ಟ ಕೃಷ್ಣನ ವೇಷ ಅವರಿಗೆ ಅಪಾರ ಕೀರ್ತಿ ತಂದುಕೊಟ್ಟಿದೆ. ಬೇರೆ ಬೇರೆ ತಿಟ್ಟು ಮಟ್ಟು, ಶೈಲಿಗಳ ಪ್ರಭಾವದಿಂದ ನಡುತಿಟ್ಟಿನ ಕಲಾವಿದರೆಂದು ಅಧಿಕೃತವಾಗಿ ಗುರುತಿಸಲ್ಪಡುವ ಕಲಾವಿದರು ವಿರಳವಾಗಿರುವ ಇಂದಿನ ಕಾಲಘಟ್ಟದಲ್ಲಿ, ಮುಂದಿನ ಪೀಳಿಗೆಗೆ ಆಶಾಕಿರಣವಾಗಿರುವ ಕೊಂಡಿ ಕೋಟ ಸುರೇಶರು ಪತ್ನಿ ಸುಶೀಲಾ ಮಕ್ಕಳಾದ ಸುರಕ್ಷ ಮತ್ತು ಸಮರ್ಥರೊಂದಿಗೆ ಕೋಟ ಪಡುಕೆರೆಯಲ್ಲಿ ವಾಸವಾಗಿದ್ದಾರೆ.

---

## ಧೀರ ಕಲೆಯೊಳಗೆ ಕೀರವಾಣಿಯರು – ೧೦


**ಯಕ್ಷಗಾನ ಕಲಾವಿದೆ, ತಾಳಮದ್ದಳೆ ಅರ್ಥಧಾರಿ, ಯಕ್ಷ ಶಿಕ್ಷಕಿ, ನೃತ್ಯ ವಿದುಷಿ ಶ್ರೀಮತಿ ಸುಮಂಗಲಾ ರತ್ನಾಕರರಾವ್**

**ಕ**ಲೆ ಎಲ್ಲರಿಗೂ ಒಲಿಯುವಂಥದ್ದಲ್ಲ. ಕಲೆಯೇ ಕಲೆಯ ಒಲವಿನ ಆತ್ಮವುಳ್ಳ ಕಲಾವಿದರನ್ನು ತನ್ನತ್ತ ಕೈಬೀಸಿ ಕರೆದು ಬೆಳೆಸುತ್ತದೆಯಂತೆ. ಇದಕ್ಕೆ ಉದಾಹರಣೆಯೆಂಬಂತೆ ಕಲಾಜೀವನವನ್ನೇ ತನ್ನದ್ದಾಗಿಸಿಕೊಂಡು ಬೆಳೆದು, ಇತರರನ್ನೂ ಬೆಳೆಸುತ್ತಿರುವ ***ಕಲಾವಿದೆ ನೃತ್ಯ ವಿದುಷಿ ಶ್ರೀಮತಿ ಸುಮಂಗಲಾ ರತ್ನಾಕರರಾವ್.*** ತಂದೆ ನಿವೃತ್ತ ಮುಖ್ಯೋಪಾಧ್ಯಾಯರಾದ ಪಿ. ಶ್ರೀ ರಾಮರಾವ್ ಸುರತ್ಕಲ್, ತಾಯಿ ಎನ್. ಐ.ಟಿ.ಕೆ. ಸುರತ್ಕಲ್ ನ ಹಿರಿಯ ಅಧೀಕ್ಷಕರಾಗಿ ನಿವೃತ್ತರಾದ ದಿ. ಶ್ರೀಮತಿ ಹೀರಾ ಎಚ್. ಇವರೀರ್ವರ ಒಲವ ಕುಡಿಯಾಗಿ ಬೆಳೆದ ಸುಮಂಗಲಾರಿಗೆ ಎಳವೆಯಲ್ಲೇ ಇದ್ದ ಕಲಾ ಪರಿಸರ ಇವರನ್ನು ಓರ್ವ ಕಲಾವಿದೆಯನ್ನಾಗಿಸಿತೆಂದರೆ ತಪ್ಪಲ್ಲ.

ಬಿ.ಬಿ.ಎಂ., ಎಂ.ಡಾನ್ಸ್, ಎಂ.ಎ.(ಕನ್ನಡ) ಪದವೀಧರರಲ್ಲದೇ, ಭರತನಾಟ್ಯದಲ್ಲಿ ವಿದ್ವತ್ ಪದವಿ, ಜೊತೆಗೆ ದೂರದರ್ಶನ ಕಲಾವಿದೆ, ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಜ್ಯೂನಿಯರ್ ವರೆಗಿನ ಶಿಕ್ಷಣ, ಯಕ್ಷಗಾನ ಮುಮ್ಮೇಳ-ಹಿಮ್ಮೇಳದ ಅಭ್ಯಾಸ, ಕೂಚುಪುಡಿ ನೃತ್ಯದ ಪ್ರಾಥಮಿಕ ಅಭ್ಯಾಸ – ಇವಿಷ್ಟು ಇವರ ವಿಶೇಷ ವಿದ್ಯಾರ್ಹತೆಗಳು. ಕಳೆದ 27 ವರ್ಷಗಳಿಂದ ಭರತನಾಟ್ಯ ಕಲಾವಿದೆಯಾಗಿ ಕಾಣಿಸಿಕೊಂಡದ್ದು ಮಾತ್ರವಲ್ಲದೇ ನೃತ್ಯಶಿಕ್ಷಕಿ, ನೃತ್ಯ ನಿರ್ದೇಶಕಿಯಾಗಿ ಅನೇಕ ವಿದ್ಯಾರ್ಥಿಗಳನ್ನು ತರಬೇತುಗೊಳಿಸಿದ್ದಾರೆ.

ನಾಟ್ಯಾರಾಧನಾ ಕಲಾಕೇಂದ್ರ(ರಿ) ಉರ್ವ, ಮಂಗಳೂರು ಇದು ಇವರ ಕನಸಿನ ಕೂಸು. ಈ ಸಂಸ್ಥೆಯಲ್ಲಿ ಅನೇಕ ಆಸಕ್ತ ವಿದ್ಯಾರ್ಥಿಗಳು ಭರತನಾಟ್ಯವನ್ನು ಅಭ್ಯಾಸ ಮಾಡುತ್ತಿದ್ದಾರೆ. ಯಕ್ಷಗಾನಕ್ಕೆ ಸಂಬಂಧಿಸಿದ ಇವರ ಕೂಸು ಯಕ್ಷಾರಾಧನಾ ಕಲಾಕೇಂದ್ರ (ರಿ) ಉರ್ವ, ಮಂಗಳೂರು. ಈ ಸಂಸ್ಥೆಯಲ್ಲೂ ಅದೆಷ್ಟೋ ವಿದ್ಯಾರ್ಥಿಗಳು ಉಚಿತವಾಗಿ ಯಕ್ಷಶಿಕ್ಷಣವನ್ನು ಪಡೆಯುತ್ತಿದ್ದಾರೆ. ಈ ಸಂಸ್ಥೆಯ ಇನ್ನೊಂದು ಅಂಗವೆಂದರೆ, ಮಹಿಳಾ ತಾಳಮದ್ದಳೆ ತಂಡ. ಅದೂ ಕೂಡ ಸಕ್ರಿಯವಾಗಿ ಕಲಾಸೇವೆಯಲ್ಲಿ ತೊಡಗಿಸಿಕೊಂಡಿದೆ.






ಇವರು ಯಕ್ಷಗಾನ ಚೆಂಡೆ-ಮದ್ದಳೆಯ ಪ್ರಾಥಮಿಕ ಅಭ್ಯಾಸವನ್ನು ಗುರು ಶ್ರೀ ಮಾಂಬಾಡಿ ಸುಬ್ರಹ್ಮಣ್ಯ ಭಟ್ ಇವರಲ್ಲಿಯೂ, ಭಾಗವತಿಕೆಯನ್ನು ಶ್ರೀ ಪ್ರಸಾದ್ ಚೇರ್ಕಾಡಿಯವರಲ್ಲಿಯೂ, ಯಕ್ಷಗಾನ ಮುಮ್ಮೇಳವನ್ನು ಶ್ರೀ ಸೂರಿಕುಮೇರು ಗೋವಿಂದ ಭಟ್, ಶ್ರೀ ದಿವಾಣ ಶಿವಶಂಕರ ಭಟ್, ಶ್ರಿ ರಾಕೇಶ್ ರೈ ಅಡ್ಕ ಇವರಲ್ಲಿ ಅಭ್ಯಾಸ ಮಾಡಿದ್ದಾರೆ. ಯಕ್ಷಗಾನ ತಾಳಮದ್ದಳೆಯ ಕುರಿತು ಮಾರ್ಗದರ್ಶನವನ್ನು ಶ್ರೀ ಹರೀಶ್ ಬಳಂತಿಮುಗರು ಇವರಲ್ಲಿ ಪಡೆಯುತ್ತಿದ್ದಾರೆ.

ಕಳೆದ ಹನ್ನೊಂದು ವರ್ಷಗಳಿಂದ ಯಕ್ಷಗಾನದಲ್ಲಿ ತೊಡಗಿಸಿಕೊಂಡ ಇವರು ಉಚಿತವಾಗಿ ಯಕ್ಷಗಾನ ಶಿಕ್ಷಣವನ್ನು ನೀಡುತ್ತಿದ್ದಾರೆ. ಸುಮಾರು 30 ಮಕ್ಕಳು ಹಾಗೂ 8 ಮಹಿಳೆಯರು ಇದರ ಸದುಪಯೋಗವನ್ನು ಪಡೆಯುತ್ತಿದ್ದಾರೆ. ಸುಮಂಗಲಾ ಇವರು ಇದುವರೆಗೆ ಸುಮಾರು 200ಕ್ಕೂ ಮಿಕ್ಕಿ ಯಕ್ಷಗಾನ ಪ್ರದರ್ಶನಗಳನ್ನು ದೇಶದ ಹಲವೆಡೆ ನೀಡಿರುತ್ತಾರೆ. ಯಕ್ಷಗಾನದ ಸಾತ್ವಿಕ ಪಾತ್ರಗಳನ್ನು ಬಹಳ ಔಚಿತ್ಯಪೂರ್ಣವಾಗಿ ನಿರ್ವಹಿಸುವ ಕಲಾವಿದೆ ಇವರು. ಶ್ರೀ ದೇವೀ ಮಹಾತ್ಮೆಯ ಶ್ರೀದೇವಿ, ಹಲವು ಪ್ರಸಂಗಗಳಲ್ಲಿ ಕೃಷ್ಣ, ಸುಧನ್ವಾರ್ಜುನ, ಕೃಷ್ಣಾರ್ಜುನಗಳಲ್ಲಿ ಅರ್ಜುನ, ಶ್ರೀ ಕೃಷ್ಣ ಪಾರಿಜಾತ, ನರಕಾಸುರ ಮೋಕ್ಷದ ಸತ್ಯಭಾಮೆ, ಅಲ್ಲದೇ ದಾಕ್ಷಾಯಿಣಿ. ಸುಭದ್ರೆ, ಮಾಲಿನಿ, ದ್ರೌಪದಿ, ಸರಮೆ, ರತಿ, ಜಮದಗ್ನಿ, ಮೃಕಂಡುಮುನಿ, ವಿಷ್ಣು, ಹನೂಮಂತ, ಬಲರಾಮ, ಕಿರಾತ, ದೇವೇಂದ್ರನಂತಹ ಪಾತ್ರಗಳನ್ನೂ ಸಮರ್ಥವಾಗಿ ನಿರ್ವಹಿಸಿದ ಹಿರಿಮೆ ಇವರದು. ಅನೇಕ ಹಿರಿಯ, ವೃತ್ತಿಪರ ಕಲಾವಿದರಾದ ಸೂರಿಕುಮೇರು, ಉಬರಡ್ಕ, ಸುಣ್ಣಂಬಳ ಮುಂತಾದವರೊಂದಿಗೆ ವೇದಿಕೆ ಹಂಚಿಕೊಂಡು, ಮೆಚ್ಚುಗೆ ಪಡಕೊಂಡವರು ಇವರು. "ತುಳುಕೂಟ ಕುವೈಟ್" ಆಯೋಜಿಸಿರುವ "ತುಳು ಪರ್ಬ-2015" ಕಾರ್ಯಕ್ರಮದಲ್ಲಿ ಬಡಗಿನ ಹೆಸರಾಂತ ಕಲಾವಿದರಾದ ಶ್ರೀ ಸುಜಯೀಂದ್ರ ಹಂದೆಯವರೊಂದಿಗೆ ತೆಂಕು-ಬಡಗು ಯಕ್ಷಗಾನ ಜುಗಲ್ಬಂದಿ ಕಾರ್ಯಕ್ರಮ ನೀಡಿರುತ್ತಾರೆ. ಇವರು ತಮ್ಮ ಸಂಸ್ಥೆಯಾದ ಯಕ್ಷಾರಾಧನಾ ಕಲಾಕೇಂದ್ರದ ಮೂಲಕ, ಇತರ ಸಂಸ್ಥೆಗಳ ಸಹಯೋಗದೊಂದಿಗೆ "ಯಕ್ಷೋಪಾಸನಾ"ಎನ್ನುವ

ಶಿಬಿರವನ್ನೂ ಆಯೋಜಿಸಿಕೊಂಡು ಬಂದಿರುವುದು ಉಲ್ಲೇಖನೀಯ. 2013 ರಲ್ಲಿ ಭರತನಾಟ್ಯ ಮತ್ತು ಯಕ್ಷಗಾನ ಕುರಿತ ತೌಲನಿಕ ಅಧ್ಯಯನವನ್ನು ***"ತೆಂಕುತಿಟ್ಟು ಯಕ್ಷಗಾನದಲ್ಲಿ ಅಭಿನಯ ದರ್ಪಣ"*** ಎಂಬ ಕಿರು ಸಂಶೋಧನೆಯನ್ನು ಮಾಡಿರುತ್ತಾರೆ. 2013ರ ಆಗಸ್ಟ್ 18ರಂದು ಐತಿಹಾಸಿಕ ಮಹಿಳಾ ಯಕ್ಷಗಾನ "ಶ್ರೀದೇವೀಮಹಾತ್ಮೆ" ಯನ್ನು ಸಂಯೋಜಿಸಿ, ಸಂಘಟಿಸಿ, ಮೊದಲ ಬಾರಿಗೆ ಮಹಿಳಾ ಯಕ್ಷಗಾನದ ಡಿವಿಡಿಯನ್ನು ಹೊರತಂದ ಹೆಗ್ಗಳಿಕೆ ಇವರದು.

2014ರಲ್ಲಿ ಯಕ್ಷಾರಾಧನಾ ಮಹಿಳಾ ತಾಳಮದ್ದಳೆ ತಂಡವನ್ನು ಆರಂಭಿಸಿ, ಅನೇಕ ಕಡೆಗಳಲ್ಲಿ ಕಾರ್ಯಕ್ರಮ ನೀಡಿ ಮೆಚ್ಚುಗೆ ಪಡೆದಿರುತ್ತಾರೆ. ಪ್ರಸ್ತುತ ಈ ತಂಡದಲ್ಲಿ 10 ಮಂದಿ ಸದಸ್ಯರಿದ್ದಾರೆ. ಸುಮಾರು 100ಕ್ಕೂ ಹೆಚ್ಚಿನ ತಾಳಮದ್ದಳೆ ಕಾರ್ಯಕ್ರಮಗಳಲ್ಲಿ ಅರ್ಥಧಾರಿಯಾಗಿ ಭಾಗವಹಿಸಿ, ಮೆಚ್ಚುಗೆ ಪಡೆದಿದ್ದಾರೆ. ಆಕಾಶವಾಣಿಯ ಶ್ರೇಣೀಕೃತ(ಬಿ) ತಾಳಮದ್ದಳೆ ತಂಡವನ್ನೂ ಮುನ್ನಡೆಸುತ್ತಿದ್ದಾರೆ. ಧುರವೀಳ್ಯದ ಕೌರವ, ಕರ್ಣಾರ್ಜುನದ ಶಲ್ಯ, ಕೃಷ್ಣಾರ್ಜುನದ ಕೃಷ್ಣ, ಅರ್ಜುನ, ದಾರುಕ, ಸುಭದ್ರೆ, ಜಾಂಬವತೀ ಕಲ್ಯಾಣದ ಕೃಷ್ಣ, ಬಲರಾಮ, ಕದಂಬ ಕೌಶಿಕೆಯ ಸುಗ್ರೀವ, ರಕ್ತಬೀಜ, ಸುಧನ್ವಾರ್ಜುನದ ಸುಧನ್ವ, ಅರ್ಜುನ, ಪ್ರಭಾವತಿ, ಘೋಷ ಯಾತ್ರೆಯ ಕೌರವ ಮುಂತಾದ ಅನೇಕ ಪಾತ್ರಗಳನ್ನು ಅರ್ಥಧಾರಿಯಾಗಿ ನಿರ್ವಹಿಸಿದ್ದಾರೆ. ವಿಟ್ಲ ಶಂಭುಶರ್ಮ, ಸುಣ್ಣಂಬಳ, ಕಲ್ಲಾರ್, ಬಳಂತಿಮುಗರು, ಮುಂತಾದ ಅನೇಕರೊಂದಿಗೆ ತಾಳಮದ್ದಳೆಯಲ್ಲಿ ಅರ್ಥ ಹೇಳಿದ್ದಾರೆ.

'ಬಲ್ಲಿರೇನಯ್ಯ 'ಯಕ್ಷಗಾನಪತ್ರಿಕೆಯಲ್ಲಿ ಇವರ '"ದಕ್ಷಿಣಾದಿ ಯಕ್ಷಮಾರ್ಗ" ಎಂಬ ಅಂಕಣ ಪ್ರಕಟವಾಗಿದೆ. ಹೀಗೆ ಯಕ್ಷಗಾನ ಕಲಾವಿದೆಯಾಗಿ, ತಾಳಮದ್ದಳೆ ಅರ್ಥದಾರಿಯಾಗಿ ದೇಶಾದ್ಯಂತ ಕಾರ್ಯಕ್ರಮ ನೀಡಿದಂತಹ ಕಲಾವಿದೆ ಇವರು. ಇಷ್ಟು ಮಾತ್ರವಲ್ಲದೇ ನಿರೂಪಕಿಯಾಗಿ, ನಟುವಾಂಗ ಕಲಾವಿದೆಯಾಗಿ, ಲೇಖಕಿಯಾಗಿ ಗುರುತಿಸಿಕೊಂಡದ್ದು ಮಾತ್ರವಲ್ಲದೇ, ಭರತನಾಟ್ಯ ಮಾರ್ಗದ ನೃತ್ಯಬಂಧಗಳ ಸಾಹಿತ್ಯವನ್ನು ರಚಿಸುವ ಸಾಮರ್ಥ್ಯವಂತೆ ಈಕೆ. ಅನೇಕ ಸಾಮಾಜಿಕ ಸಂಘ–ಸಂಸ್ಥೆಗಳಲ್ಲೂ ಸಕ್ರಿಯವಾಗಿ ತೊಡಗಿಸಿಕೊಂಡಿರುವಾಕೆ.



**ಸಾಯಿಸುಮಾ ಎಂ. ನಾವಡ**

ಇವರ ಸಾಧನೆಗೆ ತುಳುಕೂಟ ಕುವೈಟ್ನಲ್ಲಿ ಭಾರತೀಯ ರಾಯಭಾರಿಗಳ ಮೂಲಕ ಗೌರವ ದೊರೆತಿದೆ. ಡಾ. ರಾಜಕುಮಾರ್ ರಾಜ್ಯೋತ್ಸವ ಪ್ರಶಸ್ತಿ, ಶ್ರೀ ಗುರು ದೇವಾನುಗ್ರಹ ಪ್ರಶಸ್ತಿ, ರೆಡ್ಎಫ್. ಎಮ್. ಮಂಗಳೂರು ಇದರ 'ಸೂಪರ್ ಸಾಧಕಿ' ಪ್ರಶಸ್ತಿ. ಶ್ರೀಮತಿ ಚಂದ್ರಮ್ಮ ವಾಸುಭಟ್ಟ ಸ್ಮಾರಕ ಪ್ರಶಸ್ತಿ, ಯಕ್ಷದೇವ ಮಿತ್ರಕಲಾ ಮಂಡಳಿ ಪ್ರಶಸ್ತಿ,, ಸಂಕ್ರಾಂತಿ ಪುರಸ್ಕಾರ, ನಂದಗೋಕುಲ ಪುರಸ್ಕಾರ, ಯಕ್ಷಕಲಾ ಪುರಸ್ಕಾರ, ಕಲಾ ಕೈಂಕರ್ಯ ಪುರಸ್ಕಾರ ಹೀಗೆ ಅನೇಕ ಪ್ರಶಸ್ತಿ ಪುರಸ್ಕಾರಗಳಿಗೆ, ಸಂಮಾನಗಳಿಗೆ ಇವರು ಭಾಜನರಾಗಿದ್ದಾರೆ. ಪತಿಯಾದ ಶ್ರೀ ರತ್ನಾಕರರಾಯರ ಸಹಕಾರ ಇದಕ್ಕೆಲ್ಲಾ ಕಾರಣ ಎಂದು ಹೇಳುವುದನ್ನು ಸುಮಂಗಲಾ ಅವರು ಮರೆಯುವುದಿಲ್ಲ. ಇವರ ಕಲಾ ಜೀವನ ಇನ್ನಷ್ಟು ಭವಿತವ್ಯದಲ್ಲಿ ಬೆಳಗಲಿ ಎಂಬ ಆಶಯ ನಮ್ಮದು.


---

ಈ ಸಂಚಿಕೆಯಿಂದ ತೆಂಕು ತಿಟ್ಟಿನ ಅಗ್ರಮಾನ್ಯ ಭಾಗವತರಾದ ***ಮಾಂಬಾಡಿ ನಾರಾಯಣ ಭಾಗವತರ ಬದುಕಿನ ಕುರಿತ ಸರಣಿ ಲೇಖನ*** ಪ್ರಕಟವಾಗಲಿದೆ. ಯಕ್ಷಗಾನ ವಿದ್ವಾಂಸರಾದ ***ಡಾ. ಪಾದೇಕಲ್ ವಿಷ್ಣು ಭಟ್*** ರವರು ಬರೆದ ***ಯಕ್ಷಗಾನ ಕಲಾತಪಸ್ವಿ ಮಾಂಬಾಡಿ ನಾರಾಯಣ ಭಟ್*** ಎಂಬ ಪುಸ್ತಕದಿಂದ ಇದನ್ನು ಆಯ್ದುಕೊಳ್ಳಲಾಗಿದೆ, ಹಾಗೂ ಈ ಪುಸ್ತಕವನ್ನು ***ಕಾಂತಾವರ ಕನ್ನಡ ಸಂಘ***ದಿಂದ ಪ್ರಕಟಿಸಲಾಗಿದೆ. ಮೂಲ ಲೇಖಕರು ಹಾಗೂ ಪ್ರಕಾಶನ ಸಂಸ್ಥೆಗೆ ನಾದ ನೂಪುರ ಪತ್ರಿಕೆ ಕೃತಜ್ಞತೆಗಳನ್ನು ಸಲ್ಲಿಸುತ್ತದೆ

## ಯಕ್ಷಗಾನ ಕಲಾತಪಸ್ವಿ–ಮಾಂಬಾಡಿ ನಾರಾಯಣ ಭಾಗವತರು– ಬದುಕಿನ ನೋಟ– ಸಂಚಿಕೆ 01

### ಹಿನ್ನಲೆ

ದಕ್ಷಿಣ ಕನ್ನಡ ಜಿಲ್ಲೆಯ ಇಂದಿನ ಬಂಟ್ವಾಳ ತಾಲೂಕಿನ ಕರೋಪಾಡಿ ಗ್ರಾಮವು ಈಗಿನ ಪರಿಸ್ಥಿತಿಯಂತೆ ಕರ್ನಾಟಕದ ಕೊನೆಯ ಗ್ರಾಮವಾಗಿದೆ. ಈ ಗ್ರಾಮದಿಂದ ದಕ್ಷಿಣಕ್ಕೆ ಕೇರಳದ ಬಾಯಾರು ಗ್ರಾಮವಿದೆ. ಇದು ಇಂದಿನ ಕಾಸರಗೋಡು ತಾಲೂಕಿಗೆ ಸೇರಿದೆ. ಆದುದರಿಂದ ಕರೋಪಾಡಿ ಗ್ರಾಮವನ್ನು ಕರ್ನಾಟಕದ ಗಡಿನಾಡಿನ ಗ್ರಾಮವೆಂದೂ ಗುರುತಿಸಲಾಗುತ್ತಿದೆ. ಆದರೆ ಬಾಯಾರು ಗ್ರಾಮಕ್ಕೂ, ಕರೋಪಾಡಿ ಗ್ರಾಮಕ್ಕೂ ಆಡಳಿತದ ದೃಷ್ಟಿಯಿಂದ ಒಂದು ಗ್ರಾಮ ಕೇರಳದಲ್ಲಿಯೂ, ಒಂದು ಗ್ರಾಮ ಕರ್ನಾಟಕದಲ್ಲಿಯೂ ಇದೆಯೆಂಬುದರಿಂದಾಗಿ ಭಾಷಾ ದೃಷ್ಟಿಯಿಂದ, ಸಾಂಸ್ಕೃತಿಕ ದೃಷ್ಟಿಯಿಂದ ಯಾವ ಬೇಧಗಳೂ ಇಲ್ಲ. 1956ರ ಭಾಷಾವಾರು ಪ್ರಾಂತ್ಯ ವಿಂಗಡನೆಯ ಅನಂತರ ಕಾಸರಗೋಡು ತಾಲೂಕು ಕೇರಳಕ್ಕೆ ಸೇರಿ ಹೋದುದರಿಂದ ಹೀಗಾಗಿದೆ ಅಷ್ಟೆ. ಕ್ರಿ ಶ 20ನೇ ಶತಮಾನದ ಆರಂಭದಲ್ಲಿ ಈ ಎಲ್ಲಾ ಪ್ರದೇಶಗಳೂ ಕೃಷಿಯನ್ನೇ ನಂಬಿ ಬದುಕುತ್ತಿದ್ದ ಕುಟುಂಬಗಳಿಂದ ತುಂಬಿದ್ದವು. ಸ್ವತಃ ಕೃಷಿಕರು ಒಕ್ಕಲುಗಳ ಆಧಾರದಿಂದ ಹಾಗೂ ಸಹಕಾರದಿಂದ ಕೃಷಿ ಮುಂದುವರೆಸುವ ಕೃಷಿಕರು ಮತ್ತು ಕೃಷಿ ಕೂಲಿಕಾರರು ಈ ಗ್ರಾಮಗಳಲ್ಲಿ ವಾಸಿಸುತ್ತಿದ್ದರು. ಅತೀ ಶ್ರೀಮಂತ ವರ್ಗದವರ ಸಂಖ್ಯೆ ಅತೀ ಕಡಿಮೆಯಾಗಿತ್ತು. ಮಧ್ಯಮ ವರ್ಗದ ಸಣ್ಣ ಹಿಡುವಳಿದಾರರ ಸಂಖ್ಯೆ ಹೆಚ್ಚಾಗಿತ್ತು. ಕೆಳ ಮಧ್ಯಮ ವರ್ಗದವರ ಸಂಖ್ಯೆಯೇ ಹೆಚ್ಚೆನ್ನಬಹುದು. ಊರಿಗೆ ಅಂದಿನ ನಗರಗಳ ಸಂಪರ್ಕ ತೀರ ಸೀಮಿತವಾಗಿತ್ತು. ಮಂಗಳೂರು ಅಂದಿನ ಕಾಲದಲ್ಲಿ ನಗರವೇ ಆಗಿದ್ದರೂ ಅಂದು ಅದು ಹಳ್ಳಿಯ ಒಂದು ವಿಸ್ತೃತ ರೂಪದಲ್ಲಿ ಮಾತ್ರ ಇತ್ತೆನ್ನಬಹುದು. ಆದರೂ ಆ ನಗರದ ಸಂಪರ್ಕವೂ ಅಂದು ಈ ಪ್ರದೇಶದವರಿಗೆ ಇರಲಿಲ್ಲ. ವಿದ್ಯಾಭ್ಯಾಸವೂ ಕಡಿಮೆಯಾಗಿತ್ತು. ಸಮಾಜದಲ್ಲಿ ಸ್ವಲ್ಪ ಮುಂದುವರೆದವರೆಂದು ಪರಿಗಣಿತರಾದ ಬ್ರಾಹ್ಮಣ ಮತ್ತು ಬಂಟ ಸಮುದಾಯದಲ್ಲಿ ಮಾತ್ರ ಸಾಕಷ್ಟು ವಿದ್ಯಾಭ್ಯಾಸವಿತ್ತು. ಅವರಲ್ಲಿಯೂ ಶಾಲಾ ವಿದ್ಯಾಭ್ಯಾಸವನ್ನು ಪಡೆಯದವರ ಸಂಖ್ಯೆ ಸಾಕಷ್ಟಿತ್ತು. ಆದರೂ ಎಲ್ಲ ಸಮಾಜ ಬಂಧುಗಳ ಸದಭಿಪ್ರಾಯದ ಸಹಕಾರದಿಂದ ಹಳ್ಳಿಯ ಜೀವನ ನಡೆಯುತ್ತಿತ್ತು. ಗಮನಿಸಬೇಕಾದ ಮುಖ್ಯ ವಿಷಯವೆಂದರೆ ಈ ಎಲ್ಲರಿಗೆ ಎಲ್ಲ ವರ್ಗದವರಿಗೆ ಸಮಾನವಾದ ಸಾಂಸ್ಕೃತಿಕ ಹಿನ್ನಲೆಯನ್ನು ಒದಗಿಸಿದ್ದು ಅಂದಿನ ಯಕ್ಷಗಾನವೆಂಬುದರಲ್ಲಿ ಸಂದೇಹವಿಲ್ಲ. ಯಕ್ಷಗಾನದಲ್ಲಿ ಬಡಗುತಿಟ್ಟು, ಮತ್ತು ತೆಂಕು ತಿಟ್ಟು ಎಂಬ ಎರಡು ಬೇಧಗಳಿದ್ದು ಉಡುಪಿಯಿಂದ ದಕ್ಷಿಣಕ್ಕೆ ತೆಂಕುತಿಟ್ಟು ಯಕ್ಷಗಾನವೇ ಪ್ರಸಿದ್ಧವಾಗಿತ್ತು. ಕುಂಬಳೆ ಸೀಮೆ ಮತ್ತು ಅದಕ್ಕೆ ತಾಗಿಕೊಂಡಿರುವ ವಿಟ್ಲ ಸೀಮೆಗಳಲ್ಲಿ (ಇಂದಿನ ಕಾಸರಗೋಡು ತಾಲೂಕಿನ ಹಾಗೂ



ಬಂಟ್ವಾಳ ತಾಲೂಕಿನ ಭಾಗಗಳಲ್ಲಿ ಸಾಕಷ್ಟು ಮಂದಿ ಯಕ್ಷಗಾನ ಕಲಾವಿದರು ಆಗಿ ಹೋಗಿದ್ದರು. ಆ ಹಳೆಯ ಯಕ್ಷಗಾನ ಕಲಾವಿದರ ವೈಶಿಷ್ಟ್ಯಗಳನ್ನು ಇತ್ತೀಚೆಯವರೆಗೂ ಹಿರಿಯರು ನೆನಪಿಸಿಕೊಂಡು ಹೇಳುವುದಿತ್ತು. ಇವರೆಲ್ಲ ತೆಂಕು ತಿಟ್ಟಿನ ಕಲಾವಿದರು. ಅಂದು ಸಂಪರ್ಕ ಮಾಧ್ಯಮಗಳು ತೀರಾ ಕಡಿಮೆಯಾದುದರಿಂದ ಇವರಿಗೆ ಬಡಗುತಿಟ್ಟು ಯಕ್ಷಗಾನ ಪ್ರಭೇಧದ ಪರಿಚಯ– ಮಾಹಿತಿಗಳಿರಲಿಲ್ಲ. (ಹಿರಿಯ ಯಕ್ಷಗಾನ ಕಲಾವಿದರ ಬಗೆಗೆ ಬರೆಯಲಾದ ಜೀವನ ಚರಿತ್ರೆಗಳಲ್ಲಿ ಮತ್ತು ಆತ್ಮ ಕಥನ ರೂಪದ ಬರಹಗಳಲ್ಲಿ ಹಳೆಯ ಕಲಾವಿದರ ಬಗೆಗೆ ಉಲ್ಲೇಖಗಳು ಅಥವ ಕೆಲವು ವಿವರಗಳು ದೊರಕುತ್ತವೆ.

ಇಂದಿನ ಕೇರಳ ಕರ್ನಾಟಕಗಳ ಗಡಿಯ ಆಚೀಚೆಯಲ್ಲಿರುವ ಬಾಯಾರು, ಪೈವಳಿಕೆ, ಕರೋಪಾಡಿ ಮತ್ತು ಕನ್ಯಾನ ಗ್ರಾಮಗಳು ಯಕ್ಷಗಾನ ದೃಷ್ಟಿಯಿಂದ ವಿಶಿಷ್ಟವಾಗಿ ಗಮನಿಸಬೇಕಾದ ಪ್ರದೇಶಗಳೆಂಬುದರಲ್ಲಿ ಸಂದೇಹವಿಲ್ಲ. ಈ ಪ್ರದೇಶದಿಂದ ಬಂದ ತೆಂಕು ತಿಟ್ಟು ಕಲಾವಿದರ ಸಂಖ್ಯೆ ಬಹು ದೊಡ್ಡದು. ಕ್ರಿ. ಶ. 19-20ನೆ ಶತಮಾನಗಳಲ್ಲಿಯೂ ಪರಿಸ್ಥಿತಿ ಹಾಗೆಯೇ ಇತ್ತು. ಕ್ರಿ ಶ 19ನೆಯ ಶತಮಾನದ ಕೊನೆಗೆ ಮತ್ತು 20ನೆಯ ಶತಮಾನದ ಆದಿಭಾಗದಲ್ಲಿ ಆ ಪ್ರದೇಶಗಳಲ್ಲಿ ಹುಟ್ಟಿ ಪ್ರಸಿದ್ಧಿಗೆ ಬಂದ ಭಾಗವತರು ಮೂವರು. ಜತ್ತಿ ಈಶ್ವರ ಭಾಗವತರು (1872-1945) ಪದ್ಯಾಣ ಪುಟ್ಟು ನಾರಾಯಣ ಭಟ್ಟರು (ಸು 1890- 1960) ಮತ್ತು ಮಾಂಬಾಡಿ ನಾರಾಯಣ ಭಾಗವತರು. (1900-1990). ಈ ಪ್ರದೇಶದ ನಿಕಟ ಸಂಪರ್ಕವಿದ್ದು ಇಡಿಯ ತೆಂಕು ತಿಟ್ಟಿನಲ್ಲಿ ಪ್ರಸಿದ್ಧವಾಗಿದ್ದುದಲ್ಲದೆ ತೆಂಕುತಿಟ್ಟಿನ ಯಕ್ಷಗಾನಕ್ಕೆ ವಿಶಿಷ್ಟತೆಯನ್ನು ತಂದೊದಗಿಸಿದ ಹಿರಿಯ ಬಲಿಪ ನಾರಾಯಣ ಭಾಗವತರನ್ನೂ (1889-1966) ಇಲ್ಲಿ ನೆನಪಿಸಿಕೊಳ್ಳಬೇಕು. ಅವರೂ ಈ ಪ್ರದೇಶಕ್ಕೆ ನಿಕಟ ಸಂಪರ್ಕವಿದ್ದವರೇ. ಜತ್ತಿ ಈಶ್ವರ ಭಾಗವತರು ಕವಿ ಮುದ್ದಣನ ಸಮಕಾಲೀನರು. ಭಾಗವತರಲ್ಲದೆ, ಯಕ್ಷಗಾನ ಪ್ರಸಂಗಕರ್ತರೂ, ಹರಿಕಥೆಕಾರರೂ ಆಗಿದ್ದರು. ಅವರ ಹಲವು ಕೃತಿಗಳು ಮುದ್ರಿತವಾಗಿವೆ. ಪದ್ಯಾಣ ಪುಟ್ಟು ನಾರಾಯಣ ಭಟ್ಟರು ಇಡಿಯ ತೆಂಕುತಿಟ್ಟಿನ ಪ್ರದೇಶದಲ್ಲಿ ಪ್ರಸಿದ್ಧರಾಗಿರದಿದ್ದರೂ ತಮ್ಮ ಕುಟುಂಬದ ಪರಂಪರೆಯಲ್ಲಿ ಬಂದ ಯಕ್ಷಗಾನ ವಿದ್ಯೆಯನ್ನು ಅನುಸಂಧಾನ ಮಾಡಿ ವಿಸ್ತರಿಸಿದ ಹಿರಿಮೆಯುಳ್ಳವರು. (ಪದ್ಯಾಣದಲ್ಲಿ ಇನ್ನೊಬ್ಬ ನಾರಾಯಣ ಭಟ್ಟರಿದ್ದು ಇವರಿಗಿಂತ ವಯಸ್ಸಿನಲ್ಲಿ ಹಿರಿಯರಾದುದರಿಂದ ಊರಿನಲ್ಲಿ ಗುರುತಿಗಾಗಿ ಅವರಿಗೆ ದೊಡ್ಡ ನಾರಾಯಣ ಭಟ್ಟರೆಂದೂ ಹೆಸರಾಯಿತು) ಕ್ರಿ ಶ. 1954ರಲ್ಲಿ ಈ ಪುಟ್ಟು ನಾರಾಯಣ ಭಟ್ಟರು ಕರೋಪಾಡಿ ಗ್ರಾಮವನ್ನು ಬಿಟ್ಟು ಕೃಷಿ ವಿಸ್ತರಣೆಯಿಂದ ಜೀವನೋಪಾಯ ಕಂಡುಕೊಳ್ಳಲು ಇಂದಿನ ಸುಳ್ಯ ತಾಲೂಕಿನ ಕಲ್ಮಡ್ಕ ಸಮೀಪದ ಗೋಳಿತ್ತಜೆ ಎಂಬಲ್ಲಿಗೆ ವಲಸೆ ಹೋದರು. ಊರಿನಿಂದ ಹೊರಹೋದರೂ ಯಕ್ಷಗಾನವನ್ನು ಅವರು ಬಿಡಲಿಲ್ಲ. ಮಾಂಬಾಡಿ ನಾರಾಯಣ ಭಾಗವತರು ಈ ಪುಟ್ಟು ನಾರಾಯಣ ಭಾಗವತರ ನೇರ ಶಿಷ್ಯರು. – **ಲೇಖಕರು: ಡಾ. ಪಾದೇಕಲ್ ವಿಷ್ಣು ಭಟ್ (ಮುಂದಿನ ಸಂಚಿಕೆಯಲ್ಲಿ, ಕುಟುಂಬದ ಪರಿಚಯ)**

---

## ಕಾಡುವ ಪಾತ್ರ/ ಪ್ರಸಂಗ/ ಸನ್ನಿವೇಶ

ಕಲಾವಿದರ ಯಕ್ಷಾನುಭವದ ಪ್ರಮುಖ ನೆನಪು/ಘಟನೆಗಳನ್ನು ದಾಖಲೀಕರಿಸುವ ಅಂಕಣ ಇದು. ಪ್ರತೀ ಸಂಚಿಕೆಯಲ್ಲಿ ಇಬ್ಬರು ಕಲಾವಿದರ ಅನುಭವಗಳನ್ನು ಇಲ್ಲಿ ಸಾದರಪಡಿಸುತ್ತಿದ್ದೇವೆ. ಈ ತಿಂಗಳ ಸಂಚಿಕೆಯಲ್ಲಿ ಬಡಗು ತಿಟ್ಟಿನ ಹಿರಿಯ ಕಲಾವಿದರಾದ ಬೆಲ್ತೂರು ರಮೇಶ್ ಹಾಗೂ ತೆಂಕು ತಿಟ್ಟಿನ ಹಿರಿಯ ಕಲಾವಿದರಾದ ಬೆಳ್ಳಾರೆ ಮಂಜುನಾಥ್ ಭಟ್ ***ರವರ*** ಅನುಭವಗಳ ತುಣುಕು ಪ್ರಕಟವಾಗಿದೆ.

***ಪ್ರಶ್ನೆ: ಯಕ್ಷಗಾನಕ್ಕೆ ನಿಮ್ಮ ಪ್ರವೇಶ ಆಗಿದ್ದು ಹೇಗೆ? ಯಕ್ಷಗಾನ ಯಾನದ ಅನುಭವ ಹೇಗಿತ್ತು?***

***ಬೆ.ರ:*** ನಾನು ಬಡಕುಟುಂಬದಲ್ಲಿ ಹುಟ್ಟಿದವ. 5ನೆ ಕ್ಲಾಸ್ ಮುಗಿದ ಕೂಡಲೇ ಬೆಲ್ತೂರಿನ ಬಣ್ಣದ ರಾಮ ಬಳೆಗಾರರು ನನಗೆ ಹೂವಿನ ಕೋಲಿನ ಗೀಳನ್ನು ಹಿಡಿಸಿದರು. ಎರಡು ವರ್ಷ ನಾನು ಹೂವಿನ ಕೋಲಿನ ಗೀಳಿನಲ್ಲಿ ಇರುವಾಗ ಅವರು ನೀನು ಯಕ್ಷಗಾನಕ್ಕೆ ಬರ್ತೀಯಾ ಎಂದು ಕೇಳಿದ್ರು. ನಮ್ಮ ಮನೆಯವ್ರಿಗೆ ಯಕ್ಷಗಾನಕ್ಕೆ ಕಳುಹಿಸಿಕೊಡಲು ಮನಸ್ಸಿರಲಿಲ್ಲ. ನಾನು ಹೇಗಾದರೂ ಹೋಗಲೇಬೇಕು ಎಂಬ ಹಠ ಹಿಡಿದು ಹೋದೆ. ಮಾರಣಕಟ್ಟೆ ಮೇಳದಲ್ಲಿ ಪ್ರಥಮವಾಗಿ ಗೆಜ್ಜೆ ಕಟ್ಟಿದೆ. ಘಟಾನುಘಟಿ ಕಲಾವಿದರಾದ ಗುರು ವೀರಭದ್ರ ನಾಯಕರು, ಉಡುಪಿ ಬಸವ ನಾಯ್ಕರು, ಶ್ರೀನಿವಾಸ ನಾಯಕರು ಮೊದಲಾದವರು ಆ ಮೇಳದಲ್ಲಿದ್ದಿದ್ರು. ಒಂದು ವರ್ಷ ಕೋಡಂಗಿ ನಿತ್ಯ ವೇಷಗಳನ್ನು ಮಾಡಿಕೊಂಡು ಬಂದೆ. ಆದರೆ ಹೆಜ್ಜೆ ಪರಿಣತಿ ಆಗಲಿಲ್ಲ ಆಗ ವೀರಭದ್ರ ನಾಯಕರ ಶಿಷ್ಯ ಹೇರಂಜಾಲು ವೆಂಕಟರಮಣ ಗಾಣಿಗರಲ್ಲಿ ಹೆಜ್ಜೆ ಕಲಿಯುವುದಕ್ಕಾಗಿ ಅವರ ಮನೆಗೆ ಹೋದೆ. ಒಂದೂವರೆ ತಿಂಗಳು ಅಲ್ಲೇ ನಾನು ಹೆಜ್ಜೆ ಕಲಿತೆ. ಅಲ್ಲಿ ನನ್ನ ಕಲಿಕೆಯನ್ನು ಮುಗಿಸಿ ಪುನಃ ಮಾರಣಕಟ್ಟೆ ಮೇಳದಲ್ಲಿಯೇ ಏಳು ವರ್ಷಗಳ ಕಾಲ ಸೇವೆ ಸಲ್ಲಿಸಿದೆ. ನಂತರ ನನ್ನ ಚುರುಕುತನ ನೋಡಿ ಆರೇಳು ವರ್ಷದಲ್ಲಿ ಮಾರಣಕಟ್ಟೆ ಮೇಳದವರು ಸೇರಿ ಕುಂದಾಪುರದಲ್ಲಿ ಪ್ರಚಂಡ ಜೋಡಾಟ ನಡೆಸಿದಾಗ ಬಬ್ರುವಾಹನನ ಪಾತ್ರ ಮಾಡುವ ಅವಕಾಶ ದೊರಕಿತು. ಪ್ರಸಿದ್ಧ ಕಲಾವಿದರಾದ ಹಳ್ಳಾಡಿ ಮಂಜಯ್ಯ ಶೆಟ್ರ ಎದುರುಗಡೆ ಮುಂಡು ವೇಷ ಮಾಡಿದ್ದು ನಾನು. ಆಗ ನನ್ನ ಬಬ್ರುವಾಹನ ಪಾತ್ರವನ್ನು ನೋಡಿದ ಸಾಲಿಗ್ರಾಮ ಮೇಳದ ಯಜಮಾನರಾದ ಸೋಮನಾಥ ಹೆಗಡೆಯವರು ಆ

ಕಲಾವಿದರು: ಶ್ರೀ ರಮೇಶ್ ಬೆಲ್ತೂರು

**ಹುಟ್ಟೂರು: ಕುಂದಾಪುರ ತಾಲೂಕಿನ ಕಟ್‌ಬೆಲ್ತೂರು**

**ತಂದೆ : ಶ್ರೀ ರಾಮ ನಾಯ್ಕ**

**ತಾಯಿ: ಶ್ರೀಮತಿ ರುಕ್ಕು**

**ಧರ್ಮಪತ್ನಿ: ಶ್ರೀಮತಿ ಮುತ್ತು**

**ಸೇವೆ ಸಲ್ಲಿಸಿದ ಮೇಳಗಳು: ಮಾರಣಕಟ್ಟೆ, ಹಾಲಾಡಿ, ಸಾಲಿಗ್ರಾಮ, ಕಳವಾಡಿ, ಬಗ್ವಾಡಿ, ಮಡಾಮಕ್ಕಿ, ಮಂದಾರ್ತಿ, ಅಮೃತೇಶ್ವರಿ, ಅಜ್ರಿ ಶನೀಶ್ವರ ಮೇಳ**

**ಯಕ್ಷಗಾನದ ಗುರುಗಳು: ದಶಾವತಾರಿ ಗುರು ವೀರಭದ್ರ ನಾಯಕ್, ಶಿರಿಯಾರ ಮಂಜು ನಾಯ್ಕ, ಗುರು ಹೆರಂಜಾಲು ವೆಂಕಟರಮಣ ಗಾಣಿಗ**

**ಪ್ರಶಸ್ತಿಗಳು: ಪಳ್ಳಿ ಸೋಮನಾಥ ಹೆಗ್ಡೆ ಪ್ರಶಸ್ತಿ, ಶಿರಿಯಾರ ಮಂಜು ನಾಯ್ಕ ಪ್ರಶಸ್ತಿ, ಕಲಾರಂಗ ಪ್ರಶಸ್ತಿ, ಮೊಗವೀರ ಸಮಾಜದ ಪ್ರಶಸ್ತಿ, ಡಾ. ಜಿ. ಶಂಕರ್ ಫ್ಯಾಮಿಲಿ ಟ್ರಸ್ಟ್ ವತಿಯಿಂದ ಸನ್ಮಾನ**

ಹುಡುಗ ಯಾರು ಅವ ನಮ್ಮ ಮೇಳಕ್ಕೆ ಬೇಕು ಎಂದು ಮಂಜಯ್ಯ ಹೆಗಡೆಯವರಲ್ಲಿ ಹೇಳಿದಾಗ ನಿಂಜೂರು ಪಟೇಲರು, ಡಾ. ಉಮೇಶ್ ಹೆಗ್ಡೆಯವರು ಇವರೆಲ್ಲ ಸೇರಿ ಸಾಲಿಗ್ರಾಮ ಮೇಳಕ್ಕೆ ಕರೆದುಕೊಂಡು ಹೋದರು. 1969 ರಿಂದ 79 ರವರೆಗೆ 10 ವರ್ಷ ಸಾಲಿಗ್ರಾಮ ಮೇಳದಲ್ಲಿ ಸೇವೆ ಸಲ್ಲಿಸಿದೆ. ಅಲ್ಲಿ ಸಮರ್ಥ ಕಲಾವಿದರ ಒಡನಾಟ ಸಿಕ್ಕಿತು. ಒಳ್ಳೆ ವೇಷ ಮಾಡಲು ಅವಕಾಶ ಸಿಕ್ಕಿತು. ಕೆರೆಮನೆ ಜಗನ್ನಾಥ ಹೆಗಡೆ, ಶಂಭು ಹೆಗಡೆ ಮಹಾಬಲ ಹೆಗಡೆ, ನನ್ನ ಗುರುಗಳಾದ ವೀರಭದ್ರ ನಾಯಕರು, ಶಿರಿಯಾರ ಮಂಜು ನಾಯ್ಕರು, ಹಳ್ಳಾಡಿ ಮಂಜಯ್ಯ ಶೆಟ್ರು, ಮೊಳಹಳ್ಳಿ ಕೃಷ್ಣ ನಾಯಕರು ಇವರೆಲ್ಲ ಇದ್ದಿದ್ರು. ನನ್ನ ಬೆಳವಣಿಗೆಗೆ ಅವರೆಲ್ಲ ಬಹಳ ಸಹಕರಿಸಿ ಸೂಕ್ತ ಸಲಹೆಗಳನ್ನು ನೀಡ್ತಿದ್ರು. ನಂತರ ಅಮೇರಿಕಾದಿಂದ ಮಾರ್ಥನ್ ಅವರು ಊರಿಗೆ ಬಂದ್ರು. ಅವರು ಬಡಗಿನಿಂದ ಉತ್ತಮ ಕಲಾವಿದರನ್ನು ಆಯ್ಕೆ ಮಾಡಿ ಮಾಡಿ 1979 ರಲ್ಲಿ ಅಮೇರಿಕಾಕ್ಕೆ ಯಕ್ಷಗಾನ ಪ್ರದರ್ಶನಕ್ಕೆ ಕರೆದುಕೊಂಡು ಹೋದ್ರು. ಆ ತಂಡದಲ್ಲಿ ನಾನೂ ಒಬ್ಬನಾಗಿದ್ದೆ. ನಾವು ಮಾರ್ಥನ್ ಅವರೊಂದಿಗೆ ಅಮೇರಿಕ ಕೆನಡದಲ್ಲಿ ಒಂದೂವರೆ ತಿಂಗಳು ನಾವು ಯಕ್ಷಗಾನ ಸೇವೆಯನ್ನು ಮಾಡಿದೆವು. ಮತ್ತೆ ನಾಲ್ಕು ವರ್ಷ ಹಾಂಗ್ ಕಾಂಗ್ ಜರ್ಮನಿ ಪ್ಯಾರಿಸ್ ಇಸ್ರೇಲ್ ವಿದೇಶ ತಿರುಗಾಟ ಮಾಡಿದೆ. ಊರಿಗೆ ಬಂದಾಗ ಸೌಕೂರು ಮೇಳ ಪ್ರಥಮ ಏಳುವ ವರ್ಷ. ಅಲ್ಲಿ ಮೂರು ವರ್ಷ ನನ್ನ ಸೇವೆ ಸಲ್ಲಿಸಿದೆ. ನಂತರ ಮಂದಾರ್ತಿ ಮೇಳದಲ್ಲಿ ಮೂರು ವರ್ಷ, ಹಾಲಾಡಿಯಲ್ಲಿ 8 ವರ್ಷ, ಮಡಾಮಕ್ಕಿಯಲ್ಲಿ 5 ವರ್ಷ, ಬಗ್ವಾಡಿಯಲ್ಲಿ 6 ವರ್ಷ, ಶನೀಶ್ವರ ಮೇಳದಲ್ಲಿ 8 ವರ್ಷ, ಸೇವೆ ಸಲ್ಲಿಸಿದೆ. ನನಗೆ ಕಾಲು ಗಂಟು ನೋವು ಉಂಟಾದಾಗ ಸೌಕೂರು ಮೇಳದಲ್ಲಿ 2 ವರ್ಷ ಸೇವೆ ಸಲ್ಲಿಸಲು ಯಜಮಾನರು ಅವಕಾಶ ಮಾಡಿಕೊಟ್ಟರು. ಹೀಗೆ ಒಟ್ಟು 54 ವರ್ಷಗಳ ಅನುಭವ ನನ್ನದು.

ಹಿಂದಿನ ಯಕ್ಷಗಾನ ಜೀವನದ ಬಗ್ಗೆ ಹೇಳುವುದಾದರೆ, ಕಲಾವಿದನಿಗೆ ಆಗ ತುಂಬ ಕಷ್ಟವಿತ್ತು. ಪ್ರತಿ ನಿತ್ಯ 12 ಮೈಲಿ ದೂರ ನಡೆದುಕೊಂಡು ಹೋಗಿ ವೇಷ ಮಾಡಿದ್ದು ಊಟ ಇಲ್ಲದೇ ಇದ್ದದ್ದೂ ಉಂಟು. 8 ಗಂಟೆಗೆ ವೇಷ ಕಟ್ಟಿದ್ರೆ, ಮೂರು ನಾಲ್ಕು ವೇಷ ಮಾಡಿ ಬೆಳಗ್ಗಿನವರೆಗೆ ನಿಭಾಯಿಸುತ್ತಿದ್ದೆ. ಆಗ ಕಿರೀಟಕ್ಕೆ ಝರಿ ಸುತ್ತಿ ಪಗಡೆ ಅಟ್ಟೆ ಕಟ್ಟಬೇಕು. ಮುಕ್ಕಾಲು ಗಂಟೆ ಕೆಲಸ, ಈಗ 15 ನಿಮಿಷಕ್ಕೆ ವೇಷ ಆಗಿಬಿಡುತ್ತದೆ. ಹಿಂದಿನ ಕಲಾವಿದರಿಗೂ ಇಂದಿನ ಕಲಾವಿದರಿಗೂ ಕಲಿಕೆ ಅಧ್ಯಯನಗಳು ಪಾತ್ರಕ್ಕೆ ತೊಡಗಿಸುವಂತಹಾ ರೀತಿಯಲ್ಲಿ ಏನು ವ್ಯತ್ಯಾಸ.

ಆಗ ನಮಗೆಲ್ಲ ಹಿರಿಯ ಕಲಾವಿದರ ಬಗ್ಗೆ ತುಂಬ ಅಭಿಮಾನ ಇತ್ತು. ಅವರು ಏನು ಹೇಳ್ತಾರೆ ಕೇಳ್ಬೇಕು. ಅವರ ಸೇವೆ ಮಾಡ್ಬೇಕು. ಕಲೀಬೇಕು ಎಂಬ ಶ್ರದ್ಧೆ ಇತ್ತು. ಹಿಂದೆ ಪ್ರತಿಯೊಂದು ಮೇಳದಲ್ಲೂ ಪೌರಾಣಿಕ ಪ್ರಸಂಗವೇ ಆಗ್ತಿತ್ತು. ದಿನದಿಂದ ದಿನಕ್ಕೆ ಜ್ಞಾನ ಅಭಿವೃದ್ಧಿಯಾಗ್ತಿತ್ತು. ಈಗ ಹೆಚ್ಚಿನ ಮೇಳಗಳಲ್ಲಿ ಹೊಸ ಪ್ರಸಂಗ ಇಟ್ಟುಕೊಳ್ತಾರೆ. ಬಾಯಿಪಾಠ ಮಾಡಿದ ಹಾಗೆ ಕಾಲ ಕಳೆಯುವಂತಹ ಪರಿಸ್ಥಿತಿ ಬಂದಿದೆ ಈವಾಗ, ಎಂದು ನನ್ನ ಅನಿಸಿಕೆ. ಆದ್ರಿಂದ ಹಿಂದಿನ ವಿದ್ವತ್ ಯಕ್ಷಗಾನದ ದಾರಿ ಈಗಕ್ಕೆ ಹೋಲಿಸಿದ್ರೆ ಹಿಂದೆ ಯಕ್ಷಗಾನ ಕಲಿಯುವದು ಅತೀ ಕಷ್ಟ. ಈಗ ಕೇಂದ್ರದಲ್ಲಿ ಕೆಲಕಾಲ ಕಲಿತುಕೊಂಡು ಬರ್ತಾರೆ. ಆರಂಭದಲ್ಲೇ ಪ್ರಧಾನ ವೇಷ ಕೊಡ್ಬೇಕು ಅಂತ ಹೇಳ್ತಾರೆ. ಹಿಂದೆ ಸಂಗೀತ ಮಾಡುವವರಾಗ್ಲಿ ಭಾಗವತಿಕೆ ಮಾಡುವವರಾಗ್ಲಿ ಒಂದು ಹಂತಕ್ಕೆ ಮುಟ್ಟಬೇಕೆಂದರೆ ಸಾಧಾರಣ 10–12 ವರ್ಷ ಪರಿಶ್ರಮ ಪಡಬೇಕಿತ್ತು. 12–15 ವರ್ಷದ ನಂತ್ರ ಭಾಗವತಿಕೆಯ ಸ್ಥಾನ ಸಿಗಬೇಕು. ಒಬ್ಬ ಕಲಾವಿದ ಬಬ್ರುವಾಹನ ಅಭಿಮನ್ಯು ಪಾತ್ರವನ್ನು ಸರಿಯಾಗಿ ನಿಭಾಯಿಸಬೇಕಿದ್ರೆ ಕೋಡಂಗಿ, ಬಾಲಗೋಪಾಲ ಮಾಡಿ 15 ವರ್ಷ ಆದ್ರೂ ಯಕ್ಷಗಾನದಲ್ಲಿ ಅಭ್ಯಾಸ ಮಾಡಬೇಕು. ಅದಲ್ಲದೆ ರಂಗತಂತ್ರವನ್ನು ಕಲಿಯುವುದಕ್ಕಾಗಿ ಬಿಡುವಿದ್ದಾಗ ಮಕ್ಕಳಿಗೆ ಚೆಂಡೆಗಾರರತ್ರ ಹೋಗಿ ಕುಳಿತುಕೊಳ್ಳಿ ಎಂದು ಹೇಳ್ತಾ ಇದ್ರು. ಈಗ ಬಣ್ಣ ಒರೆಸಿದ ಕೂಡಲೇ ಮನೆಗೆ ಹೋಗುವ ಮಾರ್ಗ ಯಾವುದು ಅಂತ ಯೋಚನೆ ಮಾಡ್ತಾ ಇರ್ತಾರೆ.


ಶ್ರೀ ರಮೇಶ್ ಬೇಲ್ತೂರು

***ಪ್ರಶ್ನೆ: ಯುವ ಕಲಾವಿದರು ಹಿರಿಯ ಕಲಾವಿದರಲ್ಲಿ ಕೇಳಿ ಕಲಿಯುವ ಪರಿಸ್ಥಿತಿ ಹೇಗಿದೆ?***

***ಬೆ.ರ:*** ಏನೂ ಗೊತ್ತಿಲ್ಲದೇ ಇರುವ ಸಂದರ್ಭದಲ್ಲಿ ಅಪರೂಪಕ್ಕೆ ಕೇಳುವ ಗುಣ ಬಿಟ್ರೆ ಶ್ರದ್ಧೆಯಿಂದ ಕೇಳುವ ಗುಣ ಇಲ್ಲ ಈಗ. ಹಿಂದೆ ಕಲಾವಿದರಲ್ಲಿ ರಂಗಸ್ಥಳದ ಹೆದರಿಕೆ, ಹಿರಿಯ ಕಲಾವಿದರ ಹೆದರಿಕೆ ಇತ್ತು. ಹಗಲಿನಲ್ಲಿ ಮಾರ್ಗ ಮಧ್ಯೆ ಹೋಗುವಾಗ ಹಿರಿಯ ಕಲಾವಿದರಲ್ಲಿ ಅರ್ಥ ಕೇಳ್ತಾ ಇದ್ದೆವು. ಬಿಡಾರದಲ್ಲೂ ಎಷ್ಟೇ ಕಷ್ಟವಾದರೂ ಹೆಜ್ಜೆ ಅಭ್ಯಾಸ ಮಾಡುತ್ತಿದ್ದೆವು. ಈಗ ಬಿಡಾರಕ್ಕೆ ಬರುವವರೇ ಇಲ್ಲ. ಬಣ್ಣ ಕಳಚಿದ ಕೂಡಲೇ ಮನೆಗೆ ಹೋಗ್ತಾರೆ ಸಾಂಯಂಕಾಲ ಚೌಕಿಗೆ ಬರುವುದು ಬಿಟ್ರೆ ಟೆಂಟ್ ಕೆಲಸ ಮಾಡುವವರು ಮಾತ್ರ ಬಿಡಾರದಲ್ಲಿ ಇರ್ತಾರೆ. ಆಗ ಕಲಾವಿದರೆಲ್ಲ ಒಂದು ಸ್ಥಳದಿಂದ ಮತ್ತೊಂದು ಬಿಡಾರಕ್ಕೆ ಕಲಾವಿದರೆಲ್ಲ ಸೇರಿ ಹೋಗುವ ಚೆಂದವೇ ಬೇರೆ.

***ಪ್ರಶ್ನೆ: ಈಗಿನ ಯುವಜನತೆಗೆ ಬಿಡಾರದ ಬಗ್ಗೆ ಹೆಚ್ಚಾಗಿ ಗೊತ್ತಿಲ್ಲದ ಕಾರಣ ಬಿಡಾರದ ರೊಟೀನ್, ವ್ಯವಹಾರಗಳು ಹೇಗಿರುತ್ತದೆ? ಕಲಾವಿದರ ದಿನನಿತ್ಯ ಜೀವನ ಬಿಡಾರದಲ್ಲಿ ಹೇಗಿರ್ತಿತ್ತು?***

***ಬೆ.ರ:*** ಒಂದು ಸ್ಥಳದಲ್ಲಿ ಆಟ ನಿಗದಿಯಾಗಿದ್ದರೆ, ಮುಂಚಿತವಾಗಿ ಬಿಡಾರದ, ಮನೆಗೆ ಸೂಚನೆ ಕೊಡ್ತೇವೆ. ಅಲ್ಲಿ ಆಟ ಮಾಡಿಸುವವರು ಮನೆ ಸ್ವಚ್ಛತೆಯೋ ದೇವಸ್ಥಾನ ಸ್ವಚ್ಛತೆಯೋ ಮಾಡಿ ಬಿಡಾರಕ್ಕೆ ಸಿದ್ಧ ಪಡಿಸ್ತಾರೆ. ನಮಗೆ ಸ್ನಾನಕ್ಕೆ, ಮಲಗಲಿಕ್ಕೆ ಸರಿಯಾದ ವ್ಯವಸ್ಥೆ ಮಾಡಿಕೊಡ್ತಾರೆ. ಮಲಗುವ ಮುಂಚೆ ಹಿರಿಯ ಕಲಾವಿದರಿಂದ ಕಲಿಯುವ ಪರಿಪಾಠ ಇತ್ತು. ಹಿಂದೆ ಮಂದಾರ್ತಿ, ಮಾರಣಕಟ್ಟೆ, ಸೌಕೂರು ಮೇಳಗಳಿಗೆ ಹರಕೆಯಾಟದ ಬೇಡಿಕೆಯೇ ಇರಲಿಲ್ಲ. ವೀಳ್ಯವೂ ಹೆಚ್ಚಿರಲಿಲ್ಲ. ಸಂಬಳವೂ ಕಡಿಮೆ. ನಾನು ಮೂರು ವರ್ಷದ ವರೆಗೆ ಬರೀ ನಾಲ್ಕಾಣೆ ಸಂಬಳದಲ್ಲಿ ದಿನಗಳೆದಿದ್ದೇನೆ. ವೀಳ್ಯವೇ 150 ರಿಂದ 200. ಇದರಲ್ಲಿ ಕಲಾವಿದರಿಗೆ ಸಂಬಳ ಹೇಗೆ ಕೊಡ್ತಾರೆ ಯಜಮಾನರು. ಆದ್ರೆ ಯಕ್ಷಗಾನದ ಗೀಳು. ಎಷ್ಟೇ ಕಷ್ಟವಾದರೂ ಕಲೆಯಲ್ಲಿ ತೊಡಗಿಸಿಕೊಂಡಿದ್ದೆವು. ಸಂಭಾವನೆಯ ದೃಷ್ಟಿಯಿಂದ ಅಲ್ಲ.

***ಪ್ರಶ್ನೆ:*** ಯಜಮಾನರ ಮನೋಸ್ಥಿತಿಗಳು

***ಬೆ.ರ:*** ಯಜಮಾನ್ರು ಒಗ್ಗಟ್ಟಾಗಿ ಇರ್ತಾರೆ. ಬೇರೆ ಮೇಳಕ್ಕೆ ಸೇರಿ ಜಾಸ್ತಿ ಸಂಬಳ ಪಡೆಯುವ ಆಸೆ ಹೇಳಿದ್ರೆ ಮುಂಚಿತವಾಗಿ ಆ ಮೇಳದ ಯಜಮಾನರಿಗೆ ಸೂಚನೆ ನೀಡ್ತಾರೆ. ಕಲಾವಿದನ ಏಳಿಗೆಯನ್ನು ಕಾಣುವ ಗುಣ ಹೆಚ್ಚಿನ ಯಜಮಾನರಿಗೆ ಇರುವುದಿಲ್ಲ ಎಂಬುದು ನನ್ನ ಅಭಿಪ್ರಾಯ.

***ಪ್ರಶ್ನೆ: ಕಲಾವಿದರಾಗಿ 54 ಸೇವೆ ಸಲ್ಲಿಸಿದ್ದೀರಿ. ಇಷ್ಟು ದೀರ್ಘ ಕಾಲ ಯಕ್ಷಗಾನದಲ್ಲೇ ಉಳಿದುಕೊಳ್ಳಲು ಬಲವಾದ ಕಾರಣ ಏನು?***

***ಬೆ.ರ:*** ಕಲಾಮಾತೆ ನನಗೆ ಸಾಕಷ್ಟು ನೀಡಿದ್ದಾಳೆ. ಟೆಂಟ್ ಮೇಳಕ್ಕೆ ಹೋದ ಮೇಲೆ ವರ್ಷದಿಂದ ವರ್ಷಕ್ಕೆ ಸಂಭಾವನೆ ಏರಿಸುವ ಗುಣ ಯಜಮಾನರಲ್ಲಿತ್ತು. ಪ್ರೀತಿಯೂ ಇತ್ತು. ಮಳೆಗಾಲದಲ್ಲಿ ಬೆಂಗಳೂರು ಬಾಂಬೆ ಡೆಲ್ಲಿ ವಿದೇಶ ಪ್ರವಾಸ ಮಾಡಲು ಅವಕಾಶ ಸಿಕ್ಕಿದವು. ಪ್ರಾಯ ಮುಗಿಯುವ ಹೊತ್ತಿಗೆ ಒಳ್ಳೆ ಸಂಭಾವನೆ ಸಿಕ್ತು ನಮ್ಮ ಕಾಲ ಮುಗೀತು, ಕಲಾವಿದರ ಸಂಭಾವನೆ ಹೆಚ್ಚಾಯಿತು. ಆದರೆ ಈಗ ನನ್ನ ಕಲಾಸೇವೆಯನ್ನು ಗುರುತಿಸಿ ಅನೇಕ ಪ್ರಶಸ್ತಿ ಸನ್ಮಾನಗಳು ಪಾಲಿಗೆ ಒದಗಿ ಬಂದಿವೆ. ಯಕ್ಷಸಿರಿ ಪ್ರಶಸ್ತಿ, ಮೊಳಹಳ್ಳಿ ಪ್ರಶಸ್ತಿ ಅರಾಟೆ ಮಂಜುನಾಥ ಪ್ರಶಸಿಪ್ರಿವೆಲ್ಲ ಕಲಾಮಾತೆಯ ಕೃಪೆಯಿಂದ ದೊರೆಕಿದ್ದು.

***ಪ್ರಶ್ನೆ: ಯಕ್ಷಗಾನ ಅಂದ್ರೆ ಭಕ್ತಿಯನ್ನು ಬಿಂಬಿಸುವಂಥಹ ಕತೆಗಳು ಪೌರಾಣಿಕ ಕತೆಗಳೇ ಹೆಚ್ಚಾಗಿ ಪ್ರದರ್ಶನ ಆಗುತ್ತಿತ್ತು. ಹಾಗೂ ಇದನ್ನು ಆರಾಧನಾ ಕಲೆಯಾಗಿ ನೋಡ್ತಾ ಇದ್ರು. ಆ ಸಮಯದಲ್ಲಿ ಕಾಲ್ಪನಿಕ ಪ್ರಸಂಗಗಳು ಪ್ರವರ್ಧಮಾನಕ್ಕೆ ಬರುವಂತಹಾ ಸಮಯ ಜನ ಅದನ್ನು ಹೇಗೆ ಸ್ವೀಕರಿಸ್ತಿದ್ರು? ಅದನ್ನು ಯಾವ ರೀತಿ ಸ್ವೀಕರಿಸ್ತಿದ್ರು.***



***ಬೆ.ರ:*** ಹಿಂದಿನ ಕಲಾಸಕ್ತರು ಪೌರಾಣಿಕ ಪ್ರಸಂಗಗಳನ್ನೇ ಇಷ್ಟ ಪಡ್ತಿದ್ರು. ಯುವಕರಿಗೆ ಮಾತ್ರ ಕಾಲ್ಪನಿಕ ಪ್ರಸಂಗಗಳ ಒಲವಿತ್ತು. ಪೌರಾಣಿಕ ಪ್ರಸಂಗಗಳಿಗೇ ಆಗ 3000 ದಷ್ಟ ಜನ ನೆರೆದದ್ದು ಇದೆ. ಈಗ ಬಯಲಾಟದ ಪ್ರೇಕ್ಷಕರು 11 ಗಂಟೆಯೊಳಗೆ ಮನೆಗೆ ಬರ್ತಾರೆ. ಪ್ರೇಕ್ಷಕರೇ ಇಲ್ಲದಿದ್ದರೆ ಏನು ಮಾಡಲು ಸಾಧ್ಯ?

***ಪ್ರಶ್ನೆ: ಯಕ್ಷಗಾನಕ್ಕೆ ಜಾನಪದ ಶೈಲಿಯ ಸೌಂದರ್ಯವೂ ಇದೆ, ಶಾಸ್ತ್ರೀಯ ಸೌಂದರ್ಯವೂ ಇದೆ. ಇದರಲ್ಲಿ ಪಂಡಿತರೂ ಜನಸಾಮಾನ್ಯರೂ ಸೇರಿದ್ದಾರೆ. ಅಂಥದ್ದರಲ್ಲಿ ಇಂದಿನ ಕೆಲ ಬೆಳವಣಿಗೆಗಳಿಂದ ಯಕ್ಷಗಾನ ತನ್ನ ಮೂಲ ಸೌಂದರ್ಯ ಉಳಿಸಿಕೊಳ್ಳುವಲ್ಲಿ ಸೋಲ್ತಿದ್ಯಾ?***

***ಬೆ.ರ:*** ಯಕ್ಷಗಾನಕ್ಕೆ ವೀಕ್ಷಕರು ಕಡಿಮೆ ಆದ್ರೂ ಯಕ್ಷಗಾನ ದಿನದಿಂದ ದಿನಕ್ಕೆ ಬೆಳವಣಿಗೆ ಆಗ್ತಾ ಬಂತು. ಇಂದಿನ ಯುವಕರಲ್ಲಿ ಯಕ್ಷಗಾನ ಕಲಿಯುವ ಆಸಕ್ತಿಯೂ ಇದೆ. ಕೇಂದ್ರಗಳಲ್ಲಿ ಶಾಲೆಗಳಲ್ಲಿ ಯಕ್ಷಗಾನವನ್ನು ಕಲಿಸುತ್ತಿದ್ದಾರೆ. ಹಾಗಾಗಿ ಯಕ್ಷಗಾನ ಎಂದಿಗೂ ಬಿದ್ದು ಹೋಗುವುದಿಲ್ಲ ಎಂಬ ಭರವಸೆ ಇದೆ.

ಆದರೆ, ಹಿಂದಿನ ಯಕ್ಷಗಾನಕ್ಕೂ ಇಂದಿನ ಯಕ್ಷಗಾನಕ್ಕೂ ಬದಲಾವಣೆ ಇದೆ. ಕೆಲ ಪೌರಾಣಿಕ ಪ್ರಸಂಗಗಳಿಗೆ ಅದರದೇ ಆದ ಒಂದು ನಡೆ ಇದೆ. ಆ ನಡೆಯಲ್ಲಿ ಈಗಿನ ಕಲಾವಿದರು ಹೋಗುವುದಿಲ್ಲ. ಉದಾಹರಣೆಗೆ ಬಬ್ರುವಾಹನ ಪ್ರಸಂಗದಲ್ಲಿ ಮಂತ್ರಿ ಬಂದು ನಮ್ಮ ವಿರೋಧಿ ಪಕ್ಷದಿಂದ ಪತ್ರ ಬಂದಿದೆ ಎಂದು ಹೇಳುವಾಗ ಬಬ್ರುವಾಹನನಿಗೆ ಸಿಟ್ಟು ಬರುವಂತಹಾ ಸಂದರ್ಭ. ಚಿತ್ರಾಂಗದೆಯ ನಂದನ ಎಂಬ ಪದ್ಯಕ್ಕೆ ಈಗಿನ ಕಲಾವಿದರು ಲಾಲಿತ್ಯಪೂರ್ಣವಾಗಿ ಅರ್ಧ ಘಂಟೆ ಕುಣೀತಾರೆ. ನನ್ನ ದೃಷ್ಟಿಯಲ್ಲಿ ಅದು ಅಭಾಸವಾಗಿ ಕಾಣ್ತದೆ. ಪ್ರೇಕ್ಷಕರಿಗೆ ಅದು ಬೇಕು. ಆದ್ರೆ ಹಿಂದಿನ ನಡೆ ಅದಲ್ಲ ಎಂಬುದು ತೀರ್ಮಾನ ನನ್ನದು.

***ಪ್ರಶ್ನೆ: ನಿಮ್ಮಂತಹಾ ಹಿರಿಯ ಕಲಾವಿದರು ಯಕ್ಷಗಾನವನ್ನು ತಪಸ್ಸಿನ ರೀತಿ ಆರಾಧಿಸಿದವರಿದ್ದಾರೆ. ಉಸಿರಾಗಿ ಬಾಳಿದವರಿದ್ದಾರೆ ಆ ಸಾಲಿನಲ್ಲಿ ನೀವೂ ಬರ್ತೀರಿ. ಯುವಕಲಾವಿದರಿಗೆ ನಿಮ್ಮ ಕಿವಿ ಮಾತೇನು?***

***ಬೆ.ರ:*** ಕಲಾವಿದರಲ್ಲಿ ರಂಗದ ಮಟ್ಟಿಗೆ ಶ್ರದ್ಧೆಯಿಂದ ಕೆಲಸ ಮಾಡುವ ಗುಣವೂ ಬೇಕು ರಂಗಸ್ಥಳದ ಹೆದರಿಕೆಯೂ ಬೇಕು ಹಿಂದಿನ ಕಲಾವಿದರ ನಡೆಯನ್ನೇ ಇವರು ಪಾಲಿಸಿದರೆ ಒಳ್ಳೆಯದು ಅಂತ ನಾನು ಅವರಿಗೆ ಸಲಹೆ ಕೊಡಬಲ್ಲೆ. ಒಂದು ಪದ್ಯಕ್ಕೆ ಮುಗಿಯಷ್ಟರೊಳಗೆ ಮುಗಿದದ್ದೇ ಆದ್ರೆ ಅದಕ್ಕೊಂದು ಸೊಗಸುಂಟು. ಪದ್ಯ 10 ನಿಮಿಷ ಅರ್ತಗಾರಿಕೆ ಅರ್ಧ ಗಂಟೆ ಆದ್ರೆ ಏನು ಚೆಂದ ಹೇಳಿ? ರಂಗಸ್ಥಳದ ಬಿಸಿ ಉಳಿಯುವುದಿಲ್ಲ.

**ಮೆಚ್ಚಿನ ಪಾತ್ರಗಳು** – ಅಭಿಮನ್ಯು, ಬಾಲ ಪರಶುರಾಮ, ಬಬ್ರುವಾಹನ, ಸುಧನ್ವ, ಚಿತ್ರಕೇತು, ಕಮಲಧ್ವಜ, ರುಕ್ಮಾವತಿ ಕಲ್ಯಾಣ, ಕರ್ಣಾವಸಾನ, ರತಿ ಕಲ್ಯಾಣದ ಕೃಷ್ಣ ಲೀಲೆಯ ಕೃಷ್ಣ. ದೊಡ್ಡ ಪಾತ್ರವನ್ನು ಮಾಡುವ ಆಸಕ್ತಿ ಇದ್ರೂ ಅದಕ್ಕೆ ಬೇಕಾದ ಆಳ್ತನ ಇರಲಿಲ್ಲ. ಆದರೂ ಒಂದು ಸಂದಿಗ್ಧ ಪರಿಸ್ಥಿಯಲ್ಲಿ ಹಿರಣ್ಯ ಕಶಿಪುವಿನ ಪಾತ್ರವನ್ನು ನಿಭಾಯಿಸಿದ್ದೆ. ಮೇಳದಲ್ಲಿ ಅಂತಹಾ ಆಳ್ತನ ಇದ್ದವರಿದ್ದರೂ ಅವರಿಗೆ ಪ್ರಸಂಗದ ಸರಿಯಾದ ನಡೆ ಗೊತ್ತಿರ್ಲಿಲ್ಲ. ಹಾಗಾಗಿ ಅನಿವಾರ್ಯವಾಗಿ ಆ ಪಾತ್ರವನ್ನು ಮಾಡಬೇಕಾಯಿತು.

**ಕಲಾವಿದರು: ಬೆಳ್ಳಾರೆ ಮಂಜುನಾಥ್ ಭಟ್**

**ತಂದೆ: ಗೋವಿಂದ ಭಟ್, ತಾಯಿ: ಸರಸ್ವತಿಯಮ್ಮ**


**ಜನನ: 1–04–1960**

**ವಿದ್ಯಾಭ್ಯಾಸ: 8 ನೆ ತರಗತಿ**

**ಧರ್ಮಪತ್ನಿ – ಅದಿತಿ ಎಂ ಭಟ್**

**ಮಕ್ಕಳು – ಶ್ರೀ ಹರಿ ಶರ್ಮ, ಶ್ರೀರಾಮ ಶರ್ಮ, ಸಾಯಿಸುಮಾ ನಾವುಡ**

**ಪ್ರಶಸ್ತಿಗಳು: ಮಹಾಜನ ಯಕ್ಷಗಾನ ಸಮಿತಿ ಮೈಸೂರು – 1990, ಶ್ರೀ ಕೃಷ್ಣ ಯಕ್ಷ ಸಭಾ ಕದ್ರಿ ಮಂಗಳೂರು–2011, ಕಂಕನಾಡಿ ವಲಯ ಬಂಟರ ಸಂಘ –2012, ಪೂಲ ವಿಠಲ ಶೆಟ್ಟಿ ಸ್ಮೃತಿ ಪ್ರಶಸ್ತಿ – 2013, ಕಟೀಲು ಶ್ರೀ ಗೋಪಾಲಕೃಷ್ಣ ಅಸ್ರಣ್ಣ ಪ್ರಶಸ್ತಿ –2–14, ಮುಂಬೈ ಶ್ರೀಮತಿ ಮತ್ತು ಶ್ರೀ ಭಾಸ್ಕರ ಆಳ್ವ ಪ್ರಶಸ್ತಿ –2014, ಯಕ್ಷ ಕೌಸ್ತುಭ ಮರೋಳಿ– 2015, ಕಟೀಲು ಗೋಪಾಲಕೃಷ್ಣ ಅಸ್ರಣ್ಣ ಸಂಸ್ಮರಣ ಪ್ರಶಸ್ತಿ–2016, ಕದ್ರಿ ಕಂಬಳಗುತ್ತು ಬಾಲಕೃಷ್ಣ ಶೆಟ್ಟಿ ಸ್ಮೃತಿ ಪ್ರಶಸ್ತಿ–2017**



**ಬೆಳ್ಳಾರೆ ಮಂಜುನಾಥ್ ಭಟ್**

2022-23 ನೇ ಸಾಲಿನ ಯಕ್ಷ ತಿರುಗಾಟವನ್ನು ಸುಂಕದಕಟ್ಟೆಯ ಶ್ರೀ ಅಂಬಿಕಾ ಅನ್ನಪೂರ್ಣೇಶ್ವರಿ ಪ್ರಸಾದಿತ ಯಕ್ಷಗಾನ ಮಂಡಳಿಯಲ್ಲಿ ಪ್ರಧಾನ ವೇಷಧಾರಿಯಾಗಿ ಸೇವೆ ಸಲ್ಲಿಸುತ್ತಿರುವ ಬೆಳ್ಳಾರೆ ಮಂಜುನಾಥ ಭಟ್ ರವರು ಯಕ್ಷಗಾನ ಕ್ಷೇತ್ರದ ಮೇರು ಪ್ರತಿಭೆ, ಕೊಡಗರಸರ ಕಾಲದಲ್ಲಿ ಇವರ ಕುಟುಂಬದ ಹಿರಿಯರು ರಾಜಪುರೋಹಿತರಾಗಿ ಕೊಡಗಿಗೆ ಬಂದರಂತೆ. ಪಂಜ ಸೀಮೆಯಲ್ಲಿ 100 ಮನೆಯ ಪೌರೋಹಿತ್ಯಕ್ಕಾಗಿ ಬಂದವರು ಕುಳಿ ಹಿತ್ತಲಿನಲ್ಲಿ ನೆಲೆಸುತ್ತಾರೆ. ಮಂಜುನಾಥ ಭಟ್ ರವರ ತಂದೆಯವರು ಬೆಳ್ಳಾರೆಯಲ್ಲಿ ನೆಲೆಸಿದ ಕಾರಣ ಇವರ ಹುಟ್ಟು ಬಾಲ್ಯ ವಿದ್ಯಾಭ್ಯಾಸ ಎಲ್ಲ ಅಲ್ಲೇ ನಡೆಯಿತು.

ಇವರ ಶಾಲಾ ಜೀವನದಲ್ಲಿ ಶಿಕ್ಷಕರಾಗಿದ್ದ ಬಾಬು ಗೌಡ ಎಂಬವರಿಂದ ಕೆಲವು ಪಾತ್ರಗಳಿಗೆ ಬೇಕಾದ ಹೆಜ್ಜೆ ಅಭ್ಯಾಸಗಳು ನಡೆದಿರುತ್ತವೆ. ನಂತರ ಶಿವರಾಮ ಕಾರಂತರ ಒಡನಾಡಿಯಾಗಿದ್ದ ಮಾಳಂಗಾಯಿ ಕೃಷ್ಣ ಭಟ್ ಮಾಲಿಕತ್ವದ ಗೋಪಾಲಕೃಷ್ಣ ಯಕ್ಷ ಮಂಡಳಿ ಕೂಡ್ಲು ಮೇಳ ಬೆಳ್ಳಾರೆಗೆ ಬಂದಿದ್ದಾಗ ಮೇಳ ಸೇರಿ ವೇಷ ಮಾಡುವ ಆಸೆಯನ್ನು ವ್ಯಕ್ತ ಪಡಿಸುತ್ತಾರೆ. ಹಾಗೆ ಅಡ್ಕಸ್ಥಳ ಕೃಷ್ಣ ಭಂಡಾರಿ ಅವರಿಂದ ಮೊದಲ ಬಾರಿಗೆ ಗೆಜ್ಜೆ ಕಟ್ಟಿ ಕೃಷ್ಣಾರ್ಜುನದಲ್ಲಿ ಮೊದಲ ಅಭಿಮನ್ಯುವಿನ ಪಾತ್ರ ನಿರ್ವಹಿಸುತ್ತಾರೆ. ನಂತರ ಸಂಗಮ ಕಲಾಸಂಘದ ಮುಖ್ಯಸ್ಥರಾದ ಗಣಪತಿ ಭಟ್ ಕೆರೆಕೋಡಿಯವರು ಮಂಜುನಾಥ್ ಭಟ್ ರವರನ್ನು ಆದಿ ಸುಬ್ರಹ್ಮಣ್ಯ ಮೇಳಕ್ಕೆ ಸೇರಿಕೊಳ್ಳುವಂತೆ ಪತ್ರ ಬರೆದು ಕಳುಹಿಸುತ್ತಾರೆ. ಶೀನ ಭಂಡಾರಿಯವರ ವ್ಯವಸ್ಥಾಪಕತ್ವದ ಆದಿ ಸುಬ್ರಹ್ಮಣ್ಯ ಮೇಳದಲ್ಲಿ ಕೆಲ ಕಾಲ ಸೇವೆ ಸಲ್ಲಿಸಿ ಮತ್ತೆ ಧರ್ಮಸ್ಥಳ ಲಲಿತಾ ಕಲಾ ಯಕ್ಷಗಾನ ತರಬೇತಿ ಕೇಂದ್ರದಲ್ಲಿ ಮೂರನೇ ಬ್ಯಾಚ್ ನಲ್ಲಿ ಸೇರಿಕೊಳ್ಳುತ್ತಾರೆ. ಅಲ್ಲಿ ಯಕ್ಷ ದಿಗ್ಗಜರಾದ ಕುರಿಯ ವಿಠಲ ಶಾಸ್ತ್ರಿಗಳು ಮತ್ತೆ ಫಡ್ರೆ ಚಂದುರವರ ಗರಡಿಯಲ್ಲಿ ಇವರ ಯಕ್ಷಗಾನಾಭ್ಯಾಸ ಮುಂದುವರೆಯುತ್ತದೆ. ಇವರಿಗೆ ಫಡ್ರೆ ಚಂದುರವರೊಂದಿಗೆ ಹೆಚ್ಚಿನ ಹಾಗೂ ಆತ್ಮೀಯ ಒಡನಾಟವಿದ್ದು ಹೊಂದಿದ್ದು ಅವರನ್ನು ಅಣ್ಣ ಎಂದೇ ಸಂಬೋಧಿಸುವಷ್ಟು ಆಪ್ತತೆಯಿತ್ತು. ಧರ್ಮಸ್ಥಳ ಕೇಂದ್ರದಲ್ಲಿ ಅನೇಕ ಶಿಷ್ಯರನ್ನು ಕಲಾವಿದರನ್ನಾಗಿ ರೂಪಿಸಿದ ಕೀರ್ತಿ ಫಡ್ರೆ ಚಂದುರವರಿಗೆ ಸಲ್ಲುತ್ತದೆ ಎಂದು ಮಂಜುನಾಥ್ ಭಟ್ ರವರ ನುಡಿ. ಕೇಂದ್ರದ ಪ್ರಥಮ ಬ್ಯಾಚ್ ನಲ್ಲಿ ಚನ್ನಪ್ಪ ಶೆಟ್ರು, ಮುಂಡಾಜೆ ಬಾಲಕೃಷ್ಣ ಶೆಟ್ಟಿ, ನಿಡ್ಲೆ ಗೋವಿಂದ ಭಟ್ ವಿದ್ಯಾರ್ಥಿಗಳಾಗಿದ್ದರು, ಎರಡನೆ ಬ್ಯಾಚ್ ನಲ್ಲಿ ಗಂಗಯ್ಯ ಶೆಟ್ಟಿ, ಉಮೇಶ್ ಹೆಬ್ಬಾರ್, ಲಕ್ಷ್ಮಣ ಗೌಡ, ಹಾಗೂ ಮೂರನೆಯ ಬ್ಯಾಚ್ ನಲ್ಲಿ ಮಂಜುನಾಥ್ ಭಟ್, ಕೇಶವ ಬೈಪಡಿತ್ತಾಯರು, ಬಂಡಿಹೊಳೆ ವಿಷ್ಣು ಭಟ್ ಮೊದಲಾದವರು ಕೇಂದ್ರದ ವಿದ್ಯಾರ್ಥಿಗಳಾಗಿದ್ದರು ಎಂಬುದನ್ನು ನೆನಪಿಸಿಕೊಳ್ಳುತ್ತಾರೆ. ನಂತರ 1974-75ರಲ್ಲಿ ಕಟೀಲು ಕ್ಷೇತ್ರದ ಎರಡನೇ ಮೇಳ ಪ್ರಾರಂಭವಾದಾಗ ಸೂಚನೆ ನೀಡಿ ಅಲ್ಲಿ ವೇಷ ಮಾಡಲು ಅವಕಾಶ ಇದೆ ಎಂದು ಹೇಳಿ ಫಡ್ರೆ ಚಂದುರವರು ಮಂಜುನಾಥ್ ಭಟ್ ರವರು ಕಟೀಲು ಮೇಳಕ್ಕೆ ಸೇರಲು ಕಾರಣವಾಗುತ್ತಾರೆ. ಒಟ್ಟು 47 ವರ್ಷಗಳ ಕಲಾ ಜೀವನವನ್ನು ಕಟೀಲು ಮೇಳದಲ್ಲೇ ಪೂರೈಸುತ್ತಾರೆ. ಈ ಅವಧಿಯಲ್ಲಿ ಇರಾ ಗೋಪಾಲಕೃಷ್ಣ ಭಾಗವತರು, ನರಸಿಂಹ ಭಟ್ ರವರು, ಹಾಲಾಡಿ ಹಾಸ್ಯಗಾರರು, ಬಲಿಪ ನಾರಾಯಣ ಭಾಗವತರು, ಕುರಿಯ ಗಣಪತಿ ಶಾಸ್ತ್ರಿಗಳು, ಪ್ರಸಾದ್ ಬಲಿಪರು, ಬೊಟ್ಟಿಕೆರೆ ಪುರುಷೋತ್ತಮ ಪೂಂಜರು ಮತ್ತು ಪಟ್ಲ ಸತೀಶ್ ಶೆಟ್ಟಿ, ಪುಂಡಿಕಾಯಿ ಗೋಪಾಲಕೃಷ್ಣ ಭಟ್, ಬಳ್ಳಮಂಜ ಶ್ರೀನಿವಾಸ ಗೌಡ, ಮೊದಲಾದವರೊಂದಿಗೆ ತಿರುಗಾಟ ನಡೆಸಿದ್ದಾರೆ. ಬಳಿಕ 2021ನೆ ಇಸವಿಗೆ ಕಟೀಲು ಮೇಳದಿಂದ ನಿವೃತ್ತಿಯಾಗುತ್ತದೆ. ಆ ಬಳಿಕ ಶ್ಯಾಮ್ ಭಟ್ ವ್ಯವಸ್ಥಾಪಕರಾದ ದೇಂತಡ್ಕ ಮೇಳದಲ್ಲಿ ಕಳೆದ ವರ್ಷ ಹಾಗೂ ಈ ವರ್ಷ ಅಂಬಿಕಾ ಅನ್ನ ಮೇಳದಲ್ಲಿ ೪೯ ನೆಯ ವರ್ಷದ ತಿರುಗಾಟ ನಡೆಸ್ತಾ ಇದ್ದಾರೆ.

***ಯಕ್ಷಗಾನ ಕಾಲಮಿತಿ ವ್ಯವಸ್ಥೆಗೆ ಬಂದು ನಿಂತಿರುವುದರ ಕುರಿತು ಅವರ ಅಭಿಪ್ರಾಯ***

ರಾತ್ರಿಯಿಂದ ಬೆಳಿಗ್ಗೆವರೆಗೆ ನಡೆಯುತ್ತಿದ್ದ ಯಕ್ಷಗಾನದ ಸೌಂದರ್ಯ ಕಾಲಮಿತಿ ಆಟದಲ್ಲಿ ಕಾಣಸಿಗದು. ಅಕಾಲದಲ್ಲಿ ಕಾರ್ಯಕ್ರಮ ಪ್ರಾರಂಭವಾಗುತ್ತದೆ. ೮ ಗಂಟೆಯ ಪ್ರಸಂಗವನ್ನು ನಾಲ್ಕು ಗಂಟೆ ಮುಗಿಸ್ತಾರೆ. ಕಾಲಮಿತಿ ಯಕ್ಷಗಾನದಲ್ಲಿ ಕಾಲ ವ್ಯತ್ಯಾಸಗಳಿಲ್ಲ, 1ನೆ ಹಂತ, 2ನೆ ಹಂತ, 3ನೆ ಹಂತ, 4ನೇ ಹಂತ ಈ ಕಾಲವ್ಯತ್ಯಾಸ ದಲ್ಲಿ ಹಂತಹಂತವಾಗಿ ಪ್ರಸಂಗಗಳು ನಡೆಯುವುದು. ಈಗ ಪೀಠಿಕೆಯೇ ನಾಲ್ಕನೆ ಕಾಲದಲ್ಲಿ ಹೋಗುತ್ತದೆ. ಕಾಲವ್ಯತ್ಯಾಸಗಳು ಕಾಣುವುದಿಲ್ಲ. ಆದ್ರೆ ಕಾಲ ಬದಲಾದ ಹಾಗೆ ಅದಕ್ಕೆ ಹೊಂದಿಕೊಳ್ಳಬೇಕು ಎಂದು ಅವರು ಅಭಿಪ್ರಾಯಿಸುತ್ತಾರೆ.



ಬೆಳ್ಳಾರೆ ಮಂಜುನಾಥ್ ದಂಪತಿ

ಪ್ರಾರಂಭದಲ್ಲಿ ಕೆಲ ವರ್ಷಗಳ ಕಾಲ ನಿತ್ಯ ವೇಷಗಳನ್ನು ನಿರ್ವಹಿಸಿಯೇ ಹಂತ ಹಂತವಾಗಿ ಬೆಳವಣಿಗೆ ಕಂಡವರು ಬೆಳ್ಳಾರೆ ಮಂಜುನಾಥ್ ರವರು. ಕಟೀಲಿನ ಮೂರನೆ ಸೆಟ್ ನಲ್ಲಿ ಪೀಠಿಕೆ ವೇಷಧಾರಿಯಾಗಿ ಎರಡನೆ ವೇಷದವರಾದ ಗುಂಡಪ್ಪ ಗೌಡರ ಎದುರಿಗೆ ಪಾತ್ರ ನಿರ್ವಹಿಸುತ್ತಿದ್ದರು. ಒಂದನೆ ಪುಂಡು ವೇಷಗಳಾದ ನಳ, ಹರಿಶ್ಚಂದ್ರ, ಬ್ರಹ್ಮ ಕಪಾಲದ ಈಶ್ವರ, ವಿಕ್ರಮಾದಿತ್ಯ, ಮಾನಿಷಾದದ ವಾಲ್ಮೀಕಿ ಇಂಥ ಪಾತ್ರಗಳನ್ನು ಹೆಚ್ಚಾಗಿ ನಿರ್ವಹಿಸಿದ್ದಾರೆ. ಇವರ ಇಷ್ಟದ ಪಾತ್ರ ದೇವಿ ಮಹಾತ್ಮೆಯ ಸುಗ್ರೀವ. ರಕ್ತ ಬೀಜನ ಪಾತ್ರವನ್ನು ೨೫೦೦ ಹೆಚ್ಚು ನಿಭಾಯಿಸಿದ್ದೇನೆ ಎಂದು ಹೆಮ್ಮೆ ಪಟ್ಟುಕೊಳ್ಳುಕೊಳ್ಳುವ ಇವರಿಗೆ ವೀರರಸಕ್ಕಿಂತಲೂ ಕೃಷ್ಣ ಲೀಲೆಯ, ಕಂಸ ವಧೆಯ ಅಕ್ರೂರ, ಸುಗ್ರೀವ, ಇಂತಹ ಸೌಮ್ಯ ಸಾತ್ವಿಕ, ಭಾವನಾತ್ಮಕ, ಭಕ್ತಿಯುತ ಪಾತ್ರಗಳು ಅಚ್ಚುಮೆಚ್ಚು. ಇನ್ನು ಇವರ ಜಾಂಬವಂತನ ಪಾತ್ರದ ವೈಶಿಷ್ಟ್ಯತೆ ಎಂದರೆ, ಇವರು ಜಾಂಬವತಿ ಕಲ್ಯಾಣದಲ್ಲಿ ವೃದ್ಧ ಜಾಂಬವಂತನಾಗಿ ಬಿಳಿ ಗಡ್ಡದ ವೇಷ ಮಾಡಿಕೊಳ್ಳುತ್ತಾರೆ. ಉಳಿದ ಹೆಚ್ಚಿನ ಕಲಾವಿದರು ಜಾಂಬವಬಂತನ ವೇಷವನ್ನು ಕಪ್ಪು ಗಡ್ಡ ಧರಿಸಿ ಮಾಡುತ್ತಾರೆ. ಕೃತ ಯುಗ ಹಾಗೂ ತ್ರೇತಾಯುಗದ ಆದಿಯವನು ಜಾಂಬವಂತ. ತ್ರೇತಾಯುಗದ ರಾಮಾಯಣದಲ್ಲಿ ಜಾಂಬವನ ಪಾತ್ರವನ್ನು ವೃದ್ಧನಾಗಿ ಮಾಡುತ್ತಾರೆ. ಜಾಂಬವತಿ ಕಲ್ಯಾಣದ ಕಥೆ ದ್ವಾಪರದ ಯುಗದ್ದು. ಇದಕ್ಕಾಗುವಾಗ ಗಡ್ಡ ಕಪ್ಪಾಗುವುದು ಹೇಗೆ? ಮಧ್ಯದಲ್ಲಿ ಬಿಳಿ ಗಡ್ಡ ಕಟ್ಟಿ, ದ್ವಾಪರಕ್ಕಾಗುವಾಗ ಕಪ್ಪು ಗಡ್ಡ ಕಟ್ಟಿ, ರೌಡಿಸಂ ನ ಹಾಗೆ ಜಾಂಬವಂತನ ಪಾತ್ರವನ್ನು ತೋರಿಸ್ತಾರೆ ಅದು ಸರಿಯಾದ ಕ್ರಮವಲ್ಲ ಎಂಬ ವಿವರಣೆ ನೀಡುತ್ತಾರೆ. ಅವರ ಒಡನಾಟದಲ್ಲಿದ್ದ ಈಗಿನ ಕಲಾವಿದರಾದ ಮೋಹನ್ ಕುಮಾರ್ ಅಮ್ಮುಂಜೆಯವರು ಅವರನ್ನೇ ಅನುಸರಿಸಿ ಬಿಳಿ ಗಡ್ಡದ ಜಾಂಬವಂತನನ್ನು ಮಾಡುತ್ತಾರೆ.

***ಪ್ರಸಂಗಕ್ಕೆ ಪದ್ಯ ರಚನೆಯ ಅನುಭವ***

ಯಕ್ಷಗಾನ ಪ್ರಸಂಗದ ಪದ್ಯ ಬರೆಯಲು ದೇವರ ಅನುಗ್ರಹ ಬೇಕು. ಹಲವಾರು ಪ್ರಸಂಗಗಳಿಗೆ ನಾನು ಪದ್ಯ ರಚಿಸಿ ನೀಡಿದ್ದೇನೆ. ಎಂದು ಹೇಳುವ ಇವರು ದೇವಿ ಮಹಾತ್ಮೆಯಲ್ಲಿ ವಿದ್ಯುನ್ಮಾಲಿಯ ಒಡ್ಡೋಲಗದ ಸನ್ನಿವೇಶಕ್ಕೆ, ಯಕ್ಷನಲ್ಲಿ ಯುದ್ಧದ ಸಂದರ್ಭಕ್ಕೆ ಪದ್ಯ ರಚಿಸಿದ್ದಾರೆ. ಅಲ್ಲದೆ, ವಿಘ್ನ ವಿನೋದನ ಮಹಿಮೆ ಮತ್ತು ಸತೀ ಹೇಮಾವತಿ ಎಂಬ ಸ್ವತಂತ್ರ ಪ್ರಸಂಗ ರಚನೆ ಮಾಡಿದ್ದಾರೆ. ಸತೀ ಹೇಮಾವತೀ ಪ್ರಸಂಗದಲ್ಲಿ ದಾಕ್ಷಾಯಣಿಯ ಹುಟ್ಟು, ಮದುವೆ, ದೇಹತ್ಯಾಗ, ಪಾರ್ವತಿ ಕಲ್ಯಾಣದವರೆಗಿನ ಸನ್ನಿವೇಶಗಳಿದ್ದರೆ, ವಿಘ್ನ ವಿನೋದನ ಮಹಿಮೆ ಪ್ರಸಂಗದಲ್ಲಿ ಶಿವ ಪಾರ್ವತಿಯರ ಒಡ್ಡೋಲಗದಿಂದ ಶ್ರೀರಾಮಾಶ್ವಮೇಧದ ಕೊನೆಗೆ ಶ್ರೀ ರಾಮ ಸ್ವಸ್ತಿಕ ಕೊಡಲಿಲ್ಲವೆಂದು ಗಣಪತಿ ಕೋಪಿಸಿಕೊಳ್ಳುವ ಕಥಾಭಾಗವಿದೆ. ಈ ಪ್ರಸಂಗಗಳಿಗೆ ಬಲಿಪರು ಮುನ್ನುಡಿ ಬರೆದಿದ್ದು ಹಿರಿಯ ಸಾಹಿತಿಗಳಾದ ಅಮೃತ ಸೋಮೇಶ್ವರರು ನೋಡಿ ಮೆಚ್ಚುಗೆ ವ್ಯಕ್ತ ಪಡಿಸಿದ್ದಾರೆ. ಈ ಪ್ರಸಂಗಗಳನ್ನು ಪ್ರೊ ವಿವೇಕ್ ರೈರವರು ಪ್ರಕಟಣೆಯ ವೆಚ್ಚ ಭರಿಸಿ ಪ್ರಕಟಿಸಿದ್ದಾರೆ. ಕುರಿಯ ಗಣಪತಿ ಶಾಸ್ತ್ರಿಯವರು ಕಟೀಲು ಮೇಳದಲ್ಲಿ ಈ ಎರಡೂ ಪ್ರಸಂಗಗಳನ್ನು ಆಡಿಸಿದ್ದಾರೆ. ಇವರ ಪದ್ಯ ರಚನೆಗಳಲ್ಲಿ ಹಿಮಪತಿ ಎಂಬ ಕಾವ್ಯನಾಮವನ್ನು ಬಳಸಿಕೊಂಡಿದ್ದಾರೆ. ಪೌರಾಣಿಕ ಪ್ರಸಂಗಗಳ ನಡೆಯಲ್ಲಿ ಸುಮಾರು ಬದಲಾವಣೆಗಳಾಗಿವೆ. ಮೊದಲಿದ್ದ ಕಲಾವಿದರು ಈಗ ಇಲ್ಲ. ಹಳೆಯ ಪ್ರಸಂಗಗಳನ್ನು ಆಡಿಕೊಂಡು ಹೋಗಲು ಕಷ್ಟ. ಯಕ್ಷಗಾನದಲ್ಲಿ ಹೊಸ ಬೆಳವಣಿಗೆಗಳು ನಡೆಯುತ್ತಿವೆ ಎಂದೆನ್ನುವ ಮಂಜುನಾಥರು ಕಲೆಗೆ ಅಪಚಾರ ಆಗದಂತೆ, ಹೊಸತನ್ನು ಯಕ್ಷಗಾನದಲ್ಲಿ ರೂಢಿಸಿಕೊಂಡಲ್ಲಿ, ಅದು ಎಂದಿಗೂ ತಪ್ಪಾಗುವುದಿಲ್ಲ ಹಳೆ ಸಂಪ್ರದಾಯಕ್ಕೆ ಚ್ಯುತಿ ಆಗದ ಹಾಗೆ ಹೊಸತನ್ನು ರೂಪಿಸಿಕೊಳ್ಳುವುದು ತಪ್ಪಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

***ಯಕ್ಷಗಾನ ತರಬೇತಿ*** – ಮಂಜುನಾಥ ಭಟ್ಟರು ಮಂಗಳೂರಿನ ಕದ್ರಿ ವಿಷ್ಣು ಸ್ಮಾರಕ ಗೆಳೆಯರ ಬಳಗದವರು ನಡೆಸುತ್ತಿದ್ದ ತರಬೇತಿ ಕೇಂದ್ರದಲ್ಲಿ 1983-84-85 ನೆ ಇಸವಿಯಲ್ಲಿ 3 ವರ್ಷ ಯಕ್ಷಗಾನ ಗುರುಗಳಾಗಿ ತರಬೇತಿ ನೀಡುತ್ತಿದ್ದರು. ಅಲ್ಲದೆ ಮಲ್ಲೂರು, ಮಳಲಿ, ಕುಪ್ಪೆಪದವು, ತಳಕಳ, ಶೇಣಿ ಶಾಲೆಯಲ್ಲಿ ಯಕ್ಷಗಾನ ನಾಟ್ಯವನ್ನು ಅನೇಕ ಕಲಿಕಾರ್ಥಿಗಳಿಗೆ ಕಲಿಸಿಕೊಟ್ಟಿದ್ದಾರೆ. ಇವರ ಕೌಟುಂಬಿಕ ಹಿನ್ನಲೆಯೂ ಯಕ್ಷಗಾನದ ಬಗ್ಗೆ ಸದಭಿರುಚಿಯನ್ನು ಹೊಂದಿದ್ದು ಇವರ ಅಜ್ಜಂದಿರಾದ ಪುತ್ತೂರು ಕೃಷ್ಣ ಭಟ್, ಅಜ್ಜ ಶಂಕರ ನಾರಾಯಣ ಭಟ್ ರವರು ಕಲೆಯ ಬಗ್ಗೆ ಆಸಕ್ತಿಯನ್ನು ಹೊಂದಿದ್ದವರಾಗಿದ್ದರು. ತಂದೆ ಗೋವಿಂದ ಭಟ್ ರವರು ತಾಳಮದ್ದಳೆ ಕಾರ್ಯಕ್ರಮಗಳಿಗೆ ಕಂದ ಭಾಮಿನಿ ಷಟ್ಪದಿಯಲ್ಲಿ ಪದ್ಯ ರಚನೆ ಮಾಡುತ್ತಿದ್ದರಂತೆ. ಕೆಲವೊಂದು ವೇಷಗಳನ್ನೂ ಮಾಡಿದ್ದೂ ಇದೆ. ಇವರ ಸಹೋದರ ಸೂರ್ಯ ನಾರಾಯಣ ಭಟ್ ಬೆಳ್ಳಾರೆ ಇವರು ಜಲಜ ಸಖ ಎಂಬ ಕಾವ್ಯನಾಮದಲ್ಲಿ ಅನೇಕ ಗೀತೆಗಳು ನಾಟಕ, ಪ್ರಸಂಗ ಕಥೆ ಕವನಗಳ ಬರಹಗಾರರು, ನಾಟಕ ಕಲಾವಿದರು ಹಾಗೂ ಯಕ್ಷಗಾನ ಕಲಾವಿದರಾಗಿ ಬಹುಮುಖ ಪ್ರತಿಭೆ ಎನಿಸಿಕೊಂಡಿದ್ದಾರೆ. ನಿಡ್ಲೆ ಗೋವಿಂದ ಭಟ್ ರವರ ಕಿರಿಯ ತಂಗಿಯನ್ನು ಇವರು ವಿವಾಹವಾಗಿದ್ದು ಬೆಳ್ಳಾರೆ ಮಂಜುನಾಥ ಭಟ್ಟರಿಗೆ ಶ್ರೀಹರಿ ಮತ್ತು ಶ್ರೀರಾಮ ಗಂಡು ಇಬ್ಬರು ಮಕ್ಕಳು ಹಾಗೂ ಸಾಯಿಸುಮಾ ಎಂ ನಾವುಡ ಎಂಬ ಮಗಳಿದ್ದು ಸಂತೃಪ್ತ ಸಾಂಸಾರಿಕ ಜೀವನ ನಡೆಸುತ್ತಿದ್ದಾರೆ.

## <u>ನಮ್ಮ ಲೈಬ್ರರಿ – ದೇವಿದಾಸ ಕವಿಯ ಯಕ್ಷಗಾನ ಪ್ರಸಂಗಗಳು</u>

ದೇವಿದಾಸ ಹದಿನೇಳನೆಯ ಶತಮಾನದಲ್ಲಿ ಬದುಕಿದ್ದು ಇಂದು ಬಹಳ ಪ್ರಚಲಿತದಲ್ಲಿರುವ ಕೃಷ್ಣಸಂಧಾನ ಭೀಷ್ಮಪರ್ವ ಅಭಿಮನ್ಯುಕಾಳಗ, ಗಿರಿಜಾಕಲ್ಯಾಣ ಮೊದಲಾದ ಪ್ರಸಿದ್ಧ ಯಕ್ಷಗಾನ ಪ್ರಸಂಗಗಳನ್ನು ರಚಿಸಿದ ಕವಿ. ದೇವಿದಾಸ ಕವಿಯ ಬಗ್ಗೆ ಪ್ರಚಲಿತದಲ್ಲಿರುವ ಕಥೆಯು 1930ರಲ್ಲಿ ಉಡುಪಿಯ ಶ್ರಿಮನ್ಮಧ್ವ ಗ್ರಂಥಾಲಯದವರು ಪ್ರಕಟಿಸಿದ ದೇವಿ ಮಹಾತ್ಮೆ ಯಕ್ಷಗಾನ ಪ್ರಸಂಗ ಕೃತಿಯಲ್ಲಿ ಕಾಣಸಿಗುತ್ತದೆ. ದೇವಿದಾಸನ ತಾಯಿ ದೇಯಿ ಅಥವಾ ದೇವಿ ಹೆಸರಿನ ದಾಸಿ. ಸುಂದರಿಯೂ ಸುಗುಣಶೀಲೆಯೂ ಆಗಿದ್ದ ಕೆಲಜಾತಿಯವಳಾಗಿದ್ದ ಅವಳು ಒಬ್ಬ ಬ್ರಾಹ್ಮಣನಿಂದ ಮೊದಲನೆಯ ಹೆಣ್ಣು ಶಿಶು ಕಾವೇರಿ ಮತ್ತು ಎರಡನೆಯ ಮಗುವಾಗಿ ದೇವಿದಾಸನನ್ನು ಪಡೆಯುತ್ತಾಳೆ. ಉಡುಪಿಯ ಶ್ರೀಕೃಷ್ಣ ಮತ್ತು ಶ್ರೀ ಮಧ್ವಾಚಾರ್ಯರ ಪರಮ ಭಕ್ತನಾದ ದೇವಿದಾಸ, ಉಡುಪಿಯಲ್ಲಿ ಇತರ ಬ್ರಾಹ್ಮಣರು ಸೇರಿಸಿಕೊಳ್ಳದೆ ತೊಂದರೆ ಕೊಟ್ಟಾಗ ಕನಕ ಕಿಂಡಿಯ ಬಳಿ ನಿಂತು ಪ್ರಾರ್ಥಿಸುತ್ತ ನಿಲ್ಲುತ್ತಿದ್ದನಂತೆ. ಹುಚ್ಚನಂತೆ ಇದ್ದ ಈತ ನಂತರ ದೇವರ ಅನುಗ್ರಹದಿಂದ ಪವಾಡ ರೀತಿಯಲ್ಲಿ ಕವಿತಾಶಕ್ತಿಯನ್ನು ಪಡೆದು ಚೌಪದಿಗಳನ್ನು, ಯಕ್ಷಗಾನ ಪ್ರಸಂಗಗಳನ್ನು ರಚಿಸಿದನೆಂದು ಹೇಳುತ್ತಾರೆ. ನಂತರ ಪಾಜಕ ಕ್ಷೇತ್ರ ಮತ್ತು ಅಲ್ಲಿನ ಸಮೀಪದ ಕುಂಜರಗಿರಿ ಕ್ಷೇತ್ರಕ್ಕೆ ಹೋಗಿ ಅಲ್ಲಿ ದೇವಿಯ ಅನುಗ್ರಹ ಪಡೆದು ದೇವಿಯ ಆಜ್ಞೆಯಂತೆ ದೇವಿ ಮಹಾತ್ಮೆ ಪ್ರಸಂಗ ರಚಿಸಿದನೆಂದು ಪ್ರತೀತಿ. ಈ ದೇವಿ ಮಹಾತ್ಮೆ ಪ್ರಸಂಗ 712 ಪದ್ಯಗಳಿಂದ ಕೂಡಿದ ಪ್ರಸಂಗ ಕೃತಿಯಾಗಿದ್ದು ಈ ಪ್ರಸಂಗವನ್ನು ಮೂರು ದಿನ ಆಟ ಆಡುತ್ತಿದ್ದರಂತೆ. ಈ ದೇವಿ ಮಹಾತ್ಮೆ ಪ್ರಸಂಗ ಅತ್ಯುತ್ತಮ ಪ್ರಾಸ, ರಸಭರಿತ ವರ್ಣನೆಗಳಿಂದ ಕೂಡಿದ ಮಾರ್ಕಂಡೇಯ ಪುರಾಣ ಆಧಾರಿತ ಕೃತಿಯಾಗಿದೆ. ದೇವಿದಾಸ ಕವಿಯ ಅಭಿಮನ್ಯು ಕಾಳಗ ಮತ್ತು ಸೈಂಧವನ ವಧೆ ಪ್ರಸಂಗ 935ರಲ್ಲಿ ಉಡುಪಿಯ ಶ್ರೀ ಮನ್ಮಧ್ವ ಸಿದ್ದಾಂತ ಗ್ರಂಥಾಲಯದಿಂದ ಹಾಗೂ ಕನ್ನಡ ಸಂಸ್ಕೃತಿ ಇಲಾಖೆ ಪ್ರಕಟಿಸಿದ ಯಕ್ಷಗಾನ ಸಂಪುಟದಲ್ಲಿ ಕೂಡ ಈ ಪ್ರಸಂಗ ಪ್ರಕಟವಾಗಿದೆ. ಇದರಲ್ಲಿ 381 ಪದ್ಯಗಳಿವೆ.. ಈತನ ಕೃಷ್ಣ ಸಂಧಾನ ಮತ್ತು ಭೀಷ್ಮ ಪರ್ವ ಪ್ರಸಂಗಗಳನ್ನು ಉಡುಪಿಯ ಶ್ರೀ ಮನ್ಮಧ್ವ ಸಿದ್ದಾಂತ ಗ್ರಂಥಾಲಯ ಉಡುಪಿ 1944ರಲ್ಲಿ ನಾಲ್ಕನೆಯ ಆವೃತ್ತಿ, 1954ರಲ್ಲಿ ಒಂಭತ್ತನೆಯ ಆವೃತ್ತಿ, 1968ರಲ್ಲಿ ಹದಿನಾರನೆಯ ಆವೃತ್ತಿಯಲ್ಲಿ, ಮಂಗಳೂರಿನ ನಿತ್ಯಾನಂದ ಗ್ರಂಥಾಲಯ ಇವರಿಂದ 1980ರಲ್ಲಿ ಪ್ರಕಟಣೆಗೊಂಡ ಈ ಪ್ರಸಂಗ ಯಕ್ಷಗಾನ ವಲಯದಲ್ಲಿ ಬಹುಶ ಅತಿ ಹೆಚ್ಚು ಮುದ್ರಣಗೊಂಡ ಕೃತಿಯಾಗಿದೆ. ಚಿತ್ರಸೇನ ಕಾಳಗ ಯಕ್ಷಗಾನ ಪ್ರಸಂಗ ಕೂಡ ಈತನ ಪ್ರಸಂಗವಾಗಿದ್ದು ಇದನ್ನು 1952ರಲ್ಲಿ ಉಡುಪಿಯ ಶ್ರೀ ಮನ್ಮಧ್ವ ಸಿದ್ದಾಂತ ಗ್ರಂಥಾಲಯದವರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರು ಮತ್ತು 2002ರಲ್ಲಿ ಶಿವಪುರ ಪ್ರಭಾಕರ ಶೆಣೈಯವರು ಪ್ರಕಟಿಸಿದ್ದಾರೆ. ಈತನ ಗಿರಿಜಾ ಕಲ್ಯಾಣ ಪ್ರಸಂಗ 1949ರಲ್ಲಿ ನಾಲ್ಕನೆಯ, 1983ರಲ್ಲಿ ಎಂಟನೆಯ ಆವೃತ್ತಿಯಲ್ಲಿ ಶ್ರೀ ಮನ್ಮಧ್ವ ಸಿದ್ದಾಂತ ಗ್ರಂಥಾಲಯದವರಿಂದ, 1973ರಲ್ಲಿ ಸುಭೋದ ಸಾಹಿತ್ಯ ಭಂಡಾರ ಹಿರಿಯಡಕ ಇವರಿಂದ ಪ್ರಕಟಿಸಲ್ಪಟ್ಟ ಮಾಹಿತಿ ಸಿಗುತ್ತದೆ. ಈ ಕವಿಯ ಬಬ್ರುವಾಹನ ಕಾಳಗ ಪ್ರಸಂಗವನ್ನು ಉಡುಪಿಯ ಶ್ರೀ ಮನ್ಮಧ್ವ ಸಿದ್ಧಾಂತ ಗ್ರಂಥಾಲಯ ಇವರು 1946ರಲ್ಲಿ, 1972ರಲ್ಲಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕೂಡ ಇದನ್ನು ಪ್ರಕಟಿಸಿದ್ದಾರೆ. ದ್ರೌಪದಿ ಸ್ವಯಂವರ ಪ್ರಸಂಗ 1951ರಲ್ಲಿ ಉಡುಪಿಯ ಶ್ರೀ ಮನ್ಮಧ್ವ ಸಿದ್ದಾಂತ ಗ್ರಂಥಾಲಯದವರಿಂದ ಮತ್ತು ಕನ್ನಡ ಸಂಸ್ಕೃತಿ ಇಲಾಖೆಯ ಯಕ್ಷಗಾನ ಸಂಪುಟದಲ್ಲಿ ಪ್ರಕಟಿತವಾಗಿದೆ. ಕೃಷ್ಣಾರ್ಜುನ ಕಾಳಗ, ಪುತ್ರಕಾಮೇಷ್ಟಿ, ಶ್ರೀ ಕೃಷ್ಣ ಬಾಲಲೀಲೆ ಪ್ರಸಂಗಗಳನ್ನು ದೇವಿದಾಸ ಕವಿ ರಚಿಸಿರುವುದಾಗಿ ಶಿವರಾಮ ಕಾರಂತರು ಯಕ್ಷಗಾನ ಬಯಲಾಟ ಪುಸ್ತಕದಲ್ಲಿ ಉಲ್ಲೇಖಿಸಿದ್ದಾರೆ. **ಲೇಖಕರು: ಉಮೇಶ ಶಿರೂರು ಬೆಂಗಳೂರು 9448353910**